# ವ್ಯಾಕರಣ ಮಾರ್ಗ



(ಪರಿಷ್ಕೃತ)

## ಹತ್ತನೆಯ ತರಗತಿ ವಿದ್ಯಾರ್ಥಿಗಳ ವ್ಯಾಕರಣ ಅಧ್ಯಯನ

(ವ್ಯಾಕರಣ – ಛಂದಸ್ಸು – ಅಲಂಕಾರಗಳು)





ಬಸವರಾಜ.ಟಿ.ಎಂ
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ ರೂಪನಗುಡಿ
ಬಳ್ಳಾರಿ ಪೂರ್ವವಲಯ ಬಳ್ಳಾರಿ ಜಿಲ್ಲೆ







ಕನ್ನಡವೆನೆ ಮನ ಮಿಡಿಯುವುದು

downloaded from: www.kpscvaani.com

## ಪರಿವಿಡಿ


| ಕ್ರ.ಸಂ | ವಿಷಯ | ಪುಟಸಂಖ್ಯೆ |
|---|---|---|
| 1 | ವರ್ಣಮಾಲೆಗಳು | 3–4 |
| 2 | ಸಮಾಸಗಳು | 05/10/17 |
| 3 | ಸಂಧಿಗಳು | 11–19 |
| 4 | ತದ್ಧಿತಾಂತಗಳು | 20–21 |
| 5 | ಕೃದಂತಗಳು | 22–24 |
| 6 | ದ್ವಿರುಕ್ತಿಗಳು | 25 |
| 7 | ಜೋಡುನುಡಿಗಳು | 26 |
| 8 | ಅನುಕರಣಾವ್ಯಗಳು | 26 |
| 9 | ತತ್ಸಮ–ತದ್ಭವ | 27–28 |
| 10 | ಅನ್ಯದೇಶಿ ಪದಗಳು | 29 |
| 11 | ಗ್ರಾಂಥಿಕ ರೂಪಗಳು | 29 |
| 12 | ವಾಕ್ಯಪ್ರಕಾರಗಳು | 30 |
| 13 | ಪದಗಳ ಅರ್ಥ | 31 |
| 14 | ವಿಭಕ್ತಿಪ್ರತ್ಯಯಗಳು | 31–33 |
| 15 | ಲೇಖನ ಚಿಹ್ನೆಗಳು | 34–35 |
| 16 | ಅವ್ಯಯಗಳು | 35 |
| 17 | ನಾಮಪದಗಳು | 36 |
| 18 | ಕ್ರಿಯಾಪದ | 37 |
| 19 | ಕಾಲಗಳು | 38 |
| 20 | ಹೊಸಗನ್ನಡ ರೂಪಗಳು | 38–40 |
| 21 | ಛಂಧಸ್ಸು | 41–57 |
| 22 | ಅಲಂಕಾರಗಳು | 58–66 |





downloaded from: www.kpscvaani.com

# 1.ವರ್ಣಮಾಲೆಗಳು

**ವರ್ಣಮಾಲೆಗಳು(49)**

- **ಸ್ವರಗಳು (13)**
  - **ಹ್ರಸ್ವ(6)**: ಅ ಇ ಉ ಋ ಎ ಒ
  - **ದೀರ್ಘ(7)**: ಆ ಈ ಊ ಏ ಐ ಓ ಔ
- **ವ್ಯಂಜನಾಕ್ಷರಗಳು(34)**
  - **ವರ್ಗೀಯ (34)**
    - **ಅಲ್ಪಪ್ರಾಣ(10)**: ಕ್ ಗ್, ಚ್ ಜ್, ಟ್ ಡ್, ತ್ ದ್, ಪ್ ಬ್
    - **ಮಹಾಪ್ರಾಣ(10)**: ಖ್ ಘ್, ಛ ಝ್, ಠ್ ಢ್, ಥ್ ಧ್, ಫ್ ಭ್
    - **ಅನುನಾಸಿಕ(5)**: ಙ್ ಞ್ ಣ್ ನ್ ಮ್
  - **ಅವರ್ಗೀಯ(9)**: ಯ್ ರ್ ಲ್ ವ್ ಶ್ ಷ್ ಸ್ ಹ್ ಳ್
- **ಯೋಗವಾಹಗಳು(2)**
  - **ಅನುಸ್ವಾರ(1)**: ಂ
  - **ವಿಸರ್ಗ(1)**: ಃ

- ಸ್ವತಂತ್ರವಾಗಿ ಉಚ್ಚರಿಸಲ್ಪಡುವ ಅಕ್ಷರಗಳು ಸ್ವರಗಳು–(13)
- ಸ್ವರಗಳ ಜೊತೆಯಲ್ಲಿ ಕೂಡಿಕೊಂಡು ಹೋಗುವ ಅಕ್ಷರಗಳು ಯೋಗವಾಹಗಳು–(2)
- ಸ್ವರಗಳ ಸಹಾಯದಿಂದ ಉಚ್ಚರಿಸಲ್ಪಡುವ ಅಕ್ಷರಗಳು ವ್ಯಂಜನಗಳು–(34)
- ಏಕಮಾತ್ರಾ ಕಾಲದಲ್ಲಿ ಉಚ್ಚರಿಸುವ ಸ್ವರಾಕ್ಷರಗಳು ಹ್ರಸ್ವಸ್ವರಗಳು–(6)
- ಎರಡು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಾಕ್ಷರಗಳು ದೀರ್ಘಸ್ವರಗಳು–(7)
- ಕಡಿಮೆ ಉಸಿರಿನಿಂದ ಉಚ್ಚರಿಸಲ್ಪಡುವ ಅಕ್ಷರಗಳು ಅಲ್ಪಪ್ರಾಣಗಳು–(10)
- ಹೆಚ್ಚು ಉಸಿರಿನಿಂದ ಉಚ್ಚರಿಸಲ್ಪಡುವ ಅಕ್ಷರಗಳು ಮಹಾಪ್ರಾಣಗಳು–(10)
- ನಾಸಿಕದ ಸಹಾಯದಿಂದ ಉಚ್ಚರಿಸುವ ಅಕ್ಷರಗಳು ಅನುನಾಸಿಕಗಳು–(5)
- ಒಂದು ವ್ಯಂಜನಕ್ಕೆ ಒಂದು ಸ್ವರ ಸೇರಿ ಆಗುವ ಅಕ್ಷರವನ್ನು ಗುಣಿತಾಕ್ಷರ ಎಂದು ಕರೆಯುತ್ತಾರೆ.
- ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಸೇರಿ ಆಗುವ ಅಕ್ಷರವನ್ನು ಸಂಯುಕ್ತಾಕ್ಷರ ಅಥವಾ ಒತ್ತಕ್ಷರ ಎಂದು ಕರೆಯಲಾಗುತ್ತದೆ.



downloaded from: www.kpscvaani.com

## ಮಾದರಿ ಪ್ರಶ್ನೆಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1) ಕನ್ನಡ ವರ್ಣಮಾಲೆಯಲ್ಲಿನ ಸ್ವರಗಳು :

ಎ) 13 ಬಿ) 9 ಸಿ) 34 ಡಿ) 2

2) ಕನ್ನಡ ವರ್ಣಮಾಲೆಯಲ್ಲಿ ಒಂದು ಮಾತ್ರಾಕಾಲದಲ್ಲಿ ಉಚ್ಚರಿಸುವ ಸ್ವರಾಕ್ಷರಗಳು :

ಎ) ದೀರ್ಘಸ್ವರ ಬಿ) ಹ್ರಸ್ವಸ್ವರ ಸಿ) ಪ್ಲುತಸ್ವರ ಡಿ) ಸುಸ್ವರ

3) ತವರ್ಗದ ಅನುನಾಸಿಕ ಅಕ್ಷರ :

ಎ) ಣ ಬಿ) ನ ಸಿ) ಮ ಡಿ) ಙ

4) ಫ , ಭ – ಇವುಗಳು :

ಎ) ಅಲ್ಪಪ್ರಾಣಗಳು ಬಿ) ಅನುನಾಸಿಕಗಳು ಸಿ) ಮಹಾಪ್ರಾಣಗಳು ಡಿ) ಅವರ್ಗೀಯ ವ್ಯಂಜನಾಕ್ಷರಗಳು

5) ಒಂದು ವ್ಯಂಜನಕ್ಕೆ ಒಂದು ಸ್ವರ ಸೇರಿ ಆಗುವ ಅಕ್ಷರ :

ಎ) ಒತ್ತಾಕ್ಷರ ಬಿ) ಗುಣಿತಾಕ್ಷರ ಸಿ) ದೀರ್ಘಸ್ವರ ಡಿ) ಹ್ರಸ್ವಸ್ವರ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

6) ಸ್ವರಗಳು : 13 : : ಯೋಗವಾಹಗಳು : ___________

7) ಮ : ಬವರ್ಗ : : ಙ : _____________

8) ಕ , ದ , ಬ : ಅಲ್ಪಪ್ರಾಣ : : ಫ , ಢ , ಥ : _____________

9) ಬಾ : ಗುಣಿತಾಕ್ಷರ : : ದ್ದ : _____________

10) ಞ , ಙ ,ನ ,ಣ , ಮ : ಅನುನಾಸಿಕಗಳು : : ಯ ,ರ ,ಲ ,ವ : _______________

11) ಅಪ್ಪ : ಸಜಾತಿಯ ಸಂಯುಕ್ತಾಕ್ಷರ : : ಅಸ್ತ್ರ : _____________________

12) ದೀರ್ಘಸ್ವರಗಳು : ದ್ವಿಮಾತ್ರ : : ಹ್ರಸ್ವ ಸ್ವರಗಳು : ____________________

13) ಕ್ ,ಗ್ : ಅಲ್ಪಪ್ರಾಣಾಕ್ಷರಗಳು : : ಛ್ ,ಝ್ : __________________

14) ವರ್ಗೀಯ ವ್ಯಂಜನಾಕ್ಷರಗಳು : 25 : : ಅವರ್ಗೀಯ ವ್ಯಂಜನಾಕ್ಷರಗಳು : ______________

15) ಆ , ಈ , ಊ : ದೀರ್ಘಸ್ವರಗಳು : : ಅ , ಇ , ಉ , ಋ : ______________

****************************************************************************************

**ಉತ್ತರಗಳು :**

**(1) ಎ) 13 (2) ಬಿ) ಹ್ರಸ್ವಸ್ವರ (3) ಬಿ) ನ (4) ಸಿ) ಮಹಾಪ್ರಾಣಗಳು (5) ಬಿ) ಗುಣಿತಾಕ್ಷರ**

**(6) 2 (7) ಕವರ್ಗ (8) ಮಹಾಪ್ರಾಣ (9) ಒತ್ತಾಕ್ಷರ/ಸಂಯುಕ್ತಾಕ್ಷರ**

**(10) ಅವರ್ಗೀಯ ವ್ಯಂಜನಾಕ್ಷರಗಳು (11) ವಿಜಾತಿ ಸಂಯುಕ್ತಾಕ್ಷರ (12) ಏಕಮಾತ್ರ**

**(13) ಮಹಾಪ್ರಾಣಾಕ್ಷರಗಳು (14) 9 (15) ಹ್ರಸ್ವ ಸ್ವರಗಳು**



downloaded from: www.kpscvaani.com

# 2.ಸಮಾಸಗಳು

**ಎರಡು ಅಥವಾ ಅನೇಕ ಪದಗಳನ್ನು ಅರ್ಥಕ್ಕನುಸಾರವಾಗಿ ಸೇರಿಸಿ ಒಂದೇ ಪದವನ್ನಾಗಿ ಮಾಡುವ ಪ್ರಕ್ರಿಯೆಯನ್ನು ಸಮಾಸ ಎನ್ನುತ್ತಾರೆ.**

**ಮೊದಲ ಪದ**–ಪೂರ್ವಪದ **ಎರಡನೆಯ ಪದ**–ಉತ್ತರಪದ

## ಸಮಾಸದ ವಿಧಗಳು

**1) ತತ್ಪುರುಷ ಸಮಾಸ : – ಪೂರ್ವಪದ – ನಾಮಪದ , ಉತ್ತರಪದ –ನಾಮಪದ (ಪ್ರಧಾನ)**

**2) ಕರ್ಮಧಾರೆಯ ಸಮಾಸ :– ಪೂರ್ವಪದ – ಗುಣವಾಚಕ , ಉತ್ತರಪದ –ನಾಮಪದ**

**3) ದ್ವಿಗು ಸಮಾಸ :– ಪೂರ್ವಪದ – ಸಂಖ್ಯಾವಾಚಕ , ಉತ್ತರಪದ –ನಾಮಪದ**

**4) ಅಂಶಿ ಸಮಾಸ :– ಅಂಶ ,ಅಂಶಿ**

**5) ದ್ವಂದ್ವ ಸಮಾಸ :– ಎಲ್ಲಾ ಪದಗಳ ಅರ್ಥ ಪ್ರಧಾನ**

**6) ಕ್ರಿಯಾ ಸಮಾಸ :– ಪೂರ್ವಪದ – ನಾಮಪದ , ಉತ್ತರಪದ –ಕ್ರಿಯಾಪದ**

**7) ಬಹುವ್ರೀಹಿ ಸಮಾಸ :– ಅನ್ಯಪದ ಪ್ರಧಾನ**

**8) ಗಮಕ ಸಮಾಸ :– ಪೂರ್ವಪದ – ಸರ್ವನಾಮ ಅಥವಾ ಕೃದಂತ ,ಉತ್ತರಪದ –ನಾಮಪದ**

---

## 1) ತತ್ಪುರುಷ ಸಮಾಸ

**ಪೂರ್ವಪದ – ನಾಮಪದ , ಉತ್ತರಪದ –ನಾಮಪದ ,ಉತ್ತರ ಪದ ಅರ್ಥ ಪ್ರಧಾನ**

**ನಾಮಪದ :–** ಯಾವುದೇ ಒಬ್ಬ ವ್ಯಕ್ತಿ,ಒಂದು ಸ್ಥಳ,ಒಂದು ವಸ್ತು,ಪ್ರಾಣಿ ಇತ್ಯಾದಿ ಹೆಸರುಗಳು.

**ಉದಾಹರಣೆ** : ರಾಮ, ಮನೆ, ಮರ,ಬೆಟ್ಟ, ತಾವರೆ, ದೈವ

| | | | |
|---|---|---|---|
| ಬೆಟ್ಟದಾವರೆ | ತಲೆನೋವು | ಪೂದೋಟ | ಸ್ವಾಮಿದ್ರೋಹ |
| ಧನಹರಣ | ಪರಧನ | ದೈವಭಕ್ತಿ | ಕಾಲುಬಳೆ |

**ಬೆಟ್ಟದ + ತಾವರೆ , ತಲೆಯಲ್ಲಿ + ನೋವು , ಪೂವಿನ + ತೋಟ , ಸ್ವಾಮಿಗೆ + ದ್ರೋಹ , ಧನದ + ಹರಣ , ಪರರ + ಧನ , ದೈವದ + ಭಕ್ತಿ , ಕಾಲಿನ + ಬಳೆ**



downloaded from: www.kpscvaani.com

## 2) ಕರ್ಮಧಾರೆಯ ಸಮಾಸ

**ಪೂರ್ವಪದ – ಗುಣವಾಚಕ , ಉತ್ತರಪದ –ನಾಮಪದ**

**ಗುಣವಾಚಕ :–**ವಸ್ತುಗಳ ಗುಣ,ಸ್ವಭಾವ ರೀತಿಗಳನ್ನು ತಿಳಿಸುವ ಪದಗಳು.

**ಉದಾಹರಣೆ** : ಕೆಂಪು, ದೊಡ್ಡ, ಹಿರಿದು

| | | | |
|---|---|---|---|
| ಇಮ್ಮಾವು | ಹೊಸಗನ್ನಡ | ಕಟ್ಟೇಕಾಂತ | ನಲ್ಗುದುರೆ |
| ದಿವ್ಯಶರಾಳಿ | ಅತಿಕುಟಿಲ | ಮೆಲ್ವಾತು | ಪೆರ್ಮರ |
| ಹೆಮ್ಮರ | ಹೆದ್ದೊರೆ | ಪೆರ್ಮಗ | |

**ಇನಿದು + ಮಾವು , ಹೊಸತು + ಕನ್ನಡ , ಕಡಿದು + ಏಕಾಂತ , ನಲ್ಲಿತು + ಕುದುರೆ , ದಿವ್ಯವಾದ + ಶರಾಳಿ , ಅತಿಯಾದ + ಕುಟಿಲ , ಮೆಲುವಾದ + ಮಾತು , ಪಿರಿಯ + ಮಗ , ಹಿರಿದು + ಮರ , ಹಿರಿದು + ತೊರೆ , ಪಿರಿದು + ಮರ**

---

## 3) ದ್ವಿಗು ಸಮಾಸ

**ಪೂರ್ವಪದ – ಸಂಖ್ಯಾವಾಚಕ , ಉತ್ತರಪದ –ನಾಮಪದ**

**ಸಂಖ್ಯಾವಾಚಕ :–** ಸಂಖ್ಯೆಯನ್ನು ಹೇಳುವ ಪದಗಳು

**ಉದಾಹರಣೆ** : ಒಂದು,ಎರಡು,ಮೂರು, ಷಟ್(ಷಣ್) ,ಸಪ್ತ

| | | | |
|---|---|---|---|
| ಮೂಗಾವುದ | ಸಪ್ತಸ್ವರಗಳು | ಮುಕ್ಕಣ್ಣು | ಷಟ್ಕೋನ |
| ಎಣ್ದೆಸೆ | ಏಕಾಕ್ಷ | ಒಗ್ಗಟ್ಟು | ನಾಕಾಳು |

**ಮೂರು + ಗಾವುದು , ಸಪ್ತಗಳಾದ + ಸ್ವರಗಳು , ಮೂರು +ಕಣ್ಣು , ಏಕ + ಅಕ್ಷ , ಷಟ್ +ಕೋನ ,ಎಂಟು + ದೆಸೆ , ನಾಕು +ಆಳು, ಒಂದು + ಕಟ್ಟು**

---



downloaded from: www.kpscvaani.com

## 4) ಅಂಶಿ ಸಮಾಸ

**ಪೂರ್ವಪದ ಅಂಶ , ಉತ್ತರಪದ ಅಂಶಿ**

**ಅಂಶ:–** ಒಂದು ಭಾಗ

ಉದಾಹರಣೆ : ಕಾಲು.ತಲೆ

**ಅಂಶಿ:–** ಒಂದು ಭಾಗದಲ್ಲಿ ಮತ್ತೊಂದು ಭಾಗ

**ಉದಾಹರಣೆ** : ಹಿಂಗಾಲು.ಮುಂಗಾಲು

ಹಿಂದಲೆ,ಮುಂದಲೆ

| | | | |
|---|---|---|---|
| ಕಡೆಹಣ್ಣು | ಅಂಗೈ | ನಡುರಾತ್ರಿ | ಹಿಂದಲೆ |
| ಮುಂಗೈ | ಮುಂಗಾಲು | ಮುಂದಲೆ | ನಟ್ಟಡವಿ |
| ಹಿಂಗಾಲು | ತುದಿಬೆರಳು | ಕೆಳದುಟಿ | ತುದಿಮೂಗು |

**ಕಣ್ಣ+ಕಡೆ , ಕೈಯ + ಅಡಿ , ರಾತ್ರಿಯ + ನಡು , ತಲೆಯ + ಹಿಂದೆ ,ಕಾಲಿನ + ಹಿಂದೆ , ಕೈ + ಮುಂದೆ ,ಕಾಲಿನ + ಮಂದೆ , ತಲೆಯ + ಮುಂದೆ ,ಅಡವಿಯ +ನಡು , ಬೆರಳಿನ +ತುದಿ ತುಟಿಯ + ಕೆಳಗೆ , ಮೂಗಿನ + ತುದಿ**

## 5) ದ್ವಂದ್ವ ಸಮಾಸ

**ಎರಡು ಅಥವಾ ಎರಡಕ್ಕಿಂತ ಹೆಚ್ಚು ನಾಮ ಪದಗಳಿದ್ದು , ಎಲ್ಲಾ ಪದಗಳ ಅರ್ಥ ಪ್ರಧಾನ.**

| | | | |
|---|---|---|---|
| ಗಿರಿವನದುರ್ಗಗಳು | ಮಾದ್ರಮಾಗಧಯಾದವರು | ಹನುಮಭೀಮರಾಮರು | ಕರಿತುರಗರಥ |
| ಪಾರ್ಥಭೀಮರು | ಭೀಮಾರ್ಜುನರು | ಲವಕುಶರು | ಕೆರೆಕಟ್ಟೆಬಾವಿಗಳು |
| ರಾಮಲಕ್ಷ್ಮಣರು | ಸೂರ್ಯಚಂದ್ರರು | | |

**ಗಿರಿಯೂ+ವನವೂ+ದುರ್ಗವೂ** — **ಮಾದ್ರರೂ + ಮಾಗದರೂ +ಯಾದವರು**

**ಹನುಮನೂ +ಭೀಮನೂ +ರಾಮನೂ** — **ಕರಿಯೂ+ತುರಗವೂ+ರಥವೂ**

**ಪಾರ್ಥನೂ + ಭೀಮನೂ** — **ಭೀಮನೂ +ಅರ್ಜುನನೂ**

**ಲವನೂ + ಕುಶನೂ** — **ಕೆರೆಯೂ +ಕಟ್ಟೆಯೂ +ಬಾವಿಯೂ**

**ರಾಮನೂ + ಲಕ್ಷ್ಮಣನೂ** — **ಸೂರ್ಯನೂ +ಚಂದ್ರನೂ**



downloaded from: www.kpscvaani.com

## 6) ಕ್ರಿಯಾ ಸಮಾಸ

**ಪೂರ್ವಪದ – ನಾಮಪದ ಉತ್ತರಪದ –ಕ್ರಿಯಾಪದ**

**ಕ್ರಿಯಾಪದ** :–ಭಾಷೆಯಲ್ಲಿ ಕ್ರಿಯೆಯನ್ನು (ಕಾರ್ಯ) ತಿಳಿಸುವ ಪದಗಳು

ಉದಾಹರಣೆ :– ತೆರೆ,ಮುಚ್ಚು,ಏರಿಸು,ಕೇಳಿ ಬರೆಯುತ್ತಾನೆ,ನೋಡುತ್ತಾನೆ.

| | | | |
|---|---|---|---|
| ಮೈಮುಚ್ಚು | ಕೈಕೊಳ್ಳುದು | ಕೈಯಾನು | ಬಿಲ್ಗೊಂಡು |
| ಕಣ್ದರೆ | ಕಂಗೆಡು | ಹೊಗೆದೋರು | ಸೊಲ್ಗೇಳಿ |
| ಬಲವಂದು | ಸಾಕ್ಷಿಮಾಡಿ | ಬಿಲ್ದಿರುವನೇರಿಸಿ | ಮೋಸಮಾಡು |
| ಕಳ್ಗುಡಿದ | | | |

ಮೈಯನ್ನು + ಮುಚ್ಚು　　ಕೈಯನ್ನು + ಕೊಳ್ಳುದು　　ಕೈಯನ್ನು + ಆನು

ಕಣ್ಣನ್ನು+ ತೆರೆ　　ಸಾಕ್ಷಿಯನ್ನು + ಮಾಡಿ　　ಹೊಗೆಯನ್ನು + ತೋರು

ಕಣ್ಣಿನಿಂದ +ಕೆಡು　　ಬಲಕ್ಕೆ + ಬಂದು　　ಸೊಲ್ಲನ್ನು + ಕೇಳಿ

ಬಿಲ್ಲನ್ನು + ಕೊಂಡು　　ಬಿಲ್ದಿರುವನ್ನು + ಏರಿಸಿ　　ಮೋಸವನ್ನು + ಮಾಡು

ಕಳ್ಳನ್ನು + ಕುಡಿದ

## 7) ಬಹುವ್ರೀಹಿ ಸಮಾಸ

ಎರಡು ಅಥವಾ ಎರಡಕ್ಕಿಂತ ಹೆಚ್ಚು ನಾಮ ಪದಗಳು ಸೇರಿ ಸಮಾಸವಾದಾಗ , ಅನ್ಯಪದ ಪ್ರಧಾನ

| | | | |
|---|---|---|---|
| ಹಣೆಗಣ್ಣ | ದಿನಪಸುತ | ಧನುಜರಿಪು | ಮಹೀಪತಿ |
| ಮುಕ್ಕಣ್ಣ | ನಾಣಿಲಿ | ಮುರಾರಿ | ಚಕ್ರಪಾಣಿ |
| ಅಂತಕಾತ್ಮಜ | ಮೇದಿನೀಪತಿ | ರಾಜೀವಸಖ | ಇನತನೂಜ |
| ಅಬ್ಜೋದರ | ಘಟಸಂಭೂತ | ಗಾಂಡೀವಿ | ಪವನನಂದನ |



downloaded from: www.kpscvaani.com

ಹಣೆಯಲ್ಲಿ ಕಣ್ಣು ಉಳ್ಳವನು ಆವನೋ ಅವನು –ಹಣೆಗಣ್ಣ–ಶಿವ

ದಿನಪನ ಸುತನಾವನೋ ಅವನು ದಿನಪಸುತ – ಕರ್ಣ

ಧನಜರಿಗೆ ರಿಪು ಆವನೋ ಅವನು ದನುಜರಿಪು –ಕೃಷ್ಣ

ಮಹೀಗೆ ಪತಿಯಾದನು ಆವನೋ ಅವನು ಮಹೀಪತಿ – ರಾಜ

ಮೂರು ಕಣ್ಣು ಉಳ್ಳವನು ಆವನೋ ಅವನು ಮುಕ್ಕಣ್ಣ–ಶಿವ

ನಾಣ್ ಇಲ್ಲದವನು ಆವನೋ ಅವನು ನಾಣಿಲಿ –(ನಾಚಿಕೆ ಇಲ್ಲದವ)

ಮುರನ ಅರಿ ಆವನೋ ಅವನು ಮುರಾರಿ –ಕೃಷ್ಣ

ಚಕ್ರವು ಪಾಣಿಯಲ್ಲಿ ಆವನಿಗೋ ಅವನು ಚಕ್ರಪಾಣಿ–ವಿಷ್ಣು

ಅಂತಕನ ಆತ್ಮಜನಾವನೋ ಅವನು ಅಂತಕಾತ್ಮಜ –ಯುದಿಷ್ಠರ

ಮೇದಿನಿಗೆ ಪತಿ ಆವನೋ ಅವನು ಮೇದಿನೀಪತಿ –ರಾಜ

ರಾಜಿವನ ಸಖ ಆವನೋ ಅವನು ರಾಜೀವಸಖ –ಸೂರ್ಯ

ಇನನ ತನುಜ ಆವನೋ ಅವನು ಇನತನೂಜ –ಕರ್ಣ

ಉದರದಲ್ಲಿ ಕಮಲ ಉಳ್ಳವ ಅಬ್ಜೋದರ –ವಿಷ್ಣು

ಘಟದಲ್ಲಿ ಸಂಭೂತನಾದವನು ಆವನೋ ಅವನು ಘಟಸಂಭೂತ –ದ್ರೋಣ

ಗಾಂಡೀವವನ್ನು ಪಡೆದವನು ಆವನೋ ಅವನು ಗಾಂಡೀವಿ –ಅರ್ಜುನ

ಪವನನ ನಂದನ ಆವನೋ ಅವನು ಪವನನಂದನ – ಭೀಮ

## 8) ಗಮಕ ಸಮಾಸ

ಪೂರ್ವಪದ – ಸರ್ವನಾಮ ಅಥವಾ ಕೃದಂತ ಉತ್ತರಪದ –ನಾಮಪದ

| ಆಕಲ್ಲು | ಈಬೆಕ್ಕು | ನೆಯ್ದವಸ್ತ್ರ | ಆ ಹುಡುಗ |
|---|---|---|---|
| ಅದು+ ಕಲ್ಲು | ಇದು+ಬೆಕ್ಕು | ನೆಯ್ದುದು +ವಸ್ತ್ರ | ಆ + ಹುಡುಗ |



downloaded from: www.kpscvaani.com

## ಮಾದರಿ ಪ್ರಶ್ನೆಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1) ದ್ವಂದ್ವ ಸಮಾಸದ ಪದವಿದು :

(ಎ) ಮೋಸಮಾಡು (ಬಿ) ನಡುರಾತ್ರಿ (ಸಿ) ಸೂರ್ಯಚಂದ್ರರು (ಡಿ) ಪೆರ್ಮರ

2) ಕರ್ಮಧಾರೆಯ ಸಮಾಸದ ಪದವಿದು :

(ಎ) ಮೋಸಮಾಡು (ಬಿ) ನಡುರಾತ್ರಿ (ಸಿ) ಸೂರ್ಯಚಂದ್ರರು (ಡಿ) ಪೆರ್ಮರ

3) 'ಮೆಲ್ವಾತು' ಪದದಲ್ಲಿ ಏರ್ಪಟ್ಟ ಸಮಾಸ :

(ಎ) ಅಂಶಿ (ಬಿ) ಕರ್ಮಧಾರೆಯ (ಸಿ) ಕ್ರಿಯಾ (ಡಿ) ಗಮಕ ಸಮಾಸ

4) ಕ್ರಿಯಾಸಮಾಸ ಸಮಾಸದ ಪದವಿದು :

(ಎ) ಬಿಲ್ದಿರುವನೇರಿಸಿ (ಬಿ) ತಲೆನೋವು (ಸಿ) ನೇಯ್ದುವಸ್ತ್ರ (ಡಿ) ಪೆರ್ಮಗ

5) 'ನಟ್ಟಡವಿ' ಪದದಲ್ಲಿ ಏರ್ಪಟ್ಟ ಸಮಾಸವಿದು :

(ಎ) ಅಂಶಿ (ಬಿ) ಕರ್ಮಧಾರೆಯ (ಸಿ) ತತ್ಪುರುಷ (ಡಿ) ಬಹುವ್ರೀಹಿ ಸಮಾಸ

6) ಬಹುವ್ರೀಹಿ ಸಮಾಸಕ್ಕೆ ಉದಾಹರಣೆ ಪದವಿದು

(ಎ) ಅಂತಕಾತ್ಮಜ (ಬಿ) ಪಾರ್ಥಭೀಮರು (ಸಿ) ದಿವ್ಯಶರಾಳಿ (ಡಿ) ಕಳ್ಗುಡಿದ

7) ದಿವ್ಯಶರಾಳಿ –ಪದ ಈ ಸಮಾಸಕ್ಕೆ ಉದಾಹರಣೆಯಾಗಿದೆ :

(ಎ)ಕ್ರಿಯಾ ಸಮಾಸ (ಬಿ)ಕರ್ಮಧಾರೆಯ ಸಮಾಸ (ಸಿ)ತತ್ಪುರುಷ ಸಮಾಸ (ಡಿ)ಬಹುವ್ರೀಹಿ ಸಮಾಸ

8) ಮಹೀಪತಿ –ಪದ ಈ ಸಮಾಸಕ್ಕೆ ಉದಾಹರಣೆ ಯಾಗಿದೆ :

(ಎ) ತತ್ಪುರುಷ (ಬಿ) ಕರ್ಮಧಾರೆಯ (ಸಿ) ಬಹುವ್ರೀಹಿ (ಡಿ) ದ್ವಂದ್ವ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

9) ಹೊಗೆದೋರು : ಕ್ರಿಯಾಸಮಾಸ :: ಹೆದ್ದಾರಿ : _____

10) ಸ್ವಾಮಿದ್ರೋಹ : ತತ್ಪುರುಷ ಸಮಾಸ :: ಮುಂಗೈ : ________

11) ಹಣೆಗಣ್ಣ : ಬಹುವ್ರೀಹಿ :: ಬೆಟ್ಟದಾವರೆ : __________

12) ಬಿಲ್ಲನ್ನು + ಕೊಂಡು :ಬಿಲ್ಗೊಂಡು :: ತಲೆಯ + ಮುಂದೆ: _________________

13) ನೆಯ್ದುವಸ್ತ್ರ:ಗಮಕಸಮಾಸ :: ಸೂರ್ಯಚಂದ್ರರು :________________

14) ನಾಣಿಲಿ : ಬಹುವ್ರೀಹಿ ಸಮಾಸ : ಪೂದೋಟ : _______________

15) ಕಳ್ಗುಡಿದ : ಕ್ರಿಯಾ ಸಮಾಸ : ಸಾಕ್ಷಿಮಾಡಿ : _______________

16) ದೈವಭಕ್ತಿ : ತತ್ಪುರುಷ : : ಅಬ್ಜೋದರ : ________________



downloaded from: www.kpscvaani.com

**ಉತ್ತರಗಳು:**

1) (ಸಿ) ಸೂರ್ಯಚಂದ್ರರು 2) (ಡಿ) ಪೆರ್ಮರ 3) (ಬಿ) ಕರ್ಮಧಾರೆಯ 4)(ಎ) ಬಿಲ್ದಿರುವನೇರಿಸಿ 5) (ಎ) ಅಂಶಿ 6) (ಎ) ಅಂತಕಾತ್ಮಜ 7) (ಬಿ)ಕರ್ಮಧಾರೆಯ ಸಮಾಸ 8) (ಸಿ) ಬಹುವ್ರೀಹಿ 9) ಕರ್ಮಧಾರೆಯ 10) ಅಂಶಿ 11) ತತ್ಪುರುಷ ಸಮಾಸ 12) ಮುಂದಲೆ 13) ದ್ವಂದ್ವ ಸಮಾಸ 14) ತತ್ಪುರುಷ ಸಮಾಸ 15) ಕ್ರಿಯಾ ಸಮಾಸ 16) ಬಹುವ್ರೀಹಿ ಸಮಾಸ

# 3.ಸಂಧಿಗಳು

ಎರಡು ಅಕ್ಷರಗಳು ಪರಸ್ಪರ ಕಾಲ ವಿಳಂಬವಿಲ್ಲದೆ ಕೂಡಿಕೊಳ್ಳುವುದು 'ಸಂಧಿ'ಎಂದು ಅರ್ಥ

ಎರಡು ವರ್ಣಗಳು (ಅಕ್ಷರಗಳು) ಕಾಲವಿಳಂಬವಿಲ್ಲದಂತೆ ಸೇರುವುದೇ ಸಂಧಿಯೆನಿಸುವುದು.

* ಸ್ವರದ ಮುಂದೆ ಸ್ವರ ಬಂದು ಹೀಗೆ ಸಂಧಿಯಾದರೆ ಸ್ವರಸಂಧಿ ಎನ್ನುತ್ತೇವೆ.
* ಸ್ವರದ ಮುಂದೆ ವ್ಯಂಜನ ಬಂದು ಅಥವಾ ವ್ಯಂಜನದ ಮುಂದೆ ವ್ಯಂಜನ ಬಂದು ಸಂಧಿಯಾದರೆ ವ್ಯಂಜನಸಂಧಿ ಎನ್ನುತ್ತೇವೆ.

**ಸಂಧಿಗಳು**

**ಕನ್ನಡ ಸಂಧಿಗಳು** ↔ **ಸಂಸ್ಕೃತ ಸಂಧಿಗಳು**

**ಕನ್ನಡ ಸ್ವರ ಸಂಧಿಗಳು**
೧) ಲೋಪಸಂಧಿ
೨) ಆಗಮ ಸಂಧಿ

**ಕನ್ನಡ ವ್ಯಂಜನ ಸಂಧಿಗಳು**
೩) ಆದೇಶ ಸಂಧಿ

**ಸಂಸ್ಕೃತ ಸ್ವರ ಸಂಧಿಗಳು**
೧)ಸವರ್ಣ ದೀರ್ಘ ಸಂಧಿ
೨) ಗುಣಸಂಧಿ
೩) ವೃದ್ಧಿ ಸಂಧಿ
೪) ಯಣ್ ಸಂಧಿ

**ಸಂಸ್ಕೃತ ವ್ಯಂಜನ ಸಂಧಿಗಳು**
೫) ಜಶ್ತ್ವ ಸಂಧಿ
೬) ಶ್ಚುತ್ವ ಸಂಧಿ
೭) ಅನುನಾಸಿಕ ಸಂಧಿ

## ಕನ್ನಡ ಸಂಧಿಗಳು

✓ ಕನ್ನಡ-ಕನ್ನಡ ಶಬ್ದಗಳು ಸೇರಿ ಸಂಧಿಯಾದರೆ ಕನ್ನಡ ಸಂಧಿ.

✓ ಒಂದು ಸಂಸ್ಕೃತ ಶಬ್ದವು ಕನ್ನಡ ಶಬ್ದದೊಡನೆ ಸೇರಿ ಸಂಧಿಯಾದರೆ ಕನ್ನಡ ಸಂಧಿ ಆಗುತ್ತದೆ.



downloaded from: www.kpscvaani.com

## ಅ) ಕನ್ನಡದ ಸ್ವರ ಸಂಧಿಗಳು

### ೧. ಲೋಪಸಂಧಿ

ಎರಡು ಪದಗಳನ್ನು ಕೂಡಿಸುವಾಗ ಪೂರ್ವ ಪದದ ಅಂತ್ಯಕ್ಷರದಲ್ಲಿನ ಸ್ವರವು ಲೋಪವಾಗುವುದು ಪೂರ್ವ ಪದದ ಅಂತ್ಯಕ್ಷರಕ್ಕೆ ಉತ್ತರ ಪದದ ಆದಿಯಲ್ಲಿನ ಸ್ವರ ಸೇರಿಕೊಳ್ಳುವುದು

(ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವಾಗ ಪೂರ್ವ ಪದದ ಅಂತ್ಯಕ್ಷರದಲ್ಲಿನ ಸ್ವರವು ಲೋಪವಾಗುವುದು ಲೋಪಸಂಧಿ (ಅರ್ಥವು ಕೆಡದಿದ್ದ ಪಕ್ಷದಲ್ಲಿ ಮಾತ್ರ ಲೋಪವಾಗುವುದು)

ಉದಾಹರಣೆಗೆ:- ಊರು + ಅಲ್ಲಿ = ಊರಲ್ಲಿ

(ಉ + ಅ) (ಉಕಾರ ಲೋಪ)

ಪೂರ್ವಪದದ ಅಂತ್ಯದಕ್ಷರ "ರು" ಈ ಅಕ್ಷರದ ಅಂತ್ಯದಲ್ಲಿರುವ "ಉ" ಸ್ವರ ಲೋಪ ಆಗಿ ಉತ್ತರ ಪದದ ಆದಿ ಸ್ವರ "ಅ" ಸೇರಿಕೊಂಡು " ರ " ಆಗಿದೆ

| ಲೋಪ ಸಂಧಿ | | |
|---|---|---|
| ಊರೂರು | ಬಲ್ಲೆನೆಂದು | ಮಾತಂತು |
| ಸಂಪನ್ನರಾದ | ಒಮ್ಮೊಮ್ಮೆ | ತಕ್ಕನಿತು |
| ಪೊಳ್ದೆಡೆ | ಇರುಳಳಿದು | ತೆರೆದಿಕ್ಕುವ |
| ತಿಂಗಳಿನೂರು | ಚರಿಸುತದ್ವರದ | ಲೇಖನವನೋದಿ |
| ತೆಗೆದುತ್ತರೀಯಮಂ | ಬೇಡಬೇಡರಸುಗಳ | ನಿಂತಿರ್ದನು |
| ನಿಮ್ಮರಸ | ಬಂದಲ್ಲದೆ | ನಿಮ್ಮಡಿಗಳಲಿ |

ಊರು+ಊರು , ಬಲ್ಲೆನು+ಎಂದು , ಮಾತು+ಅಂತು , ಸಂಪನ್ನರು+ಆದ , ಒಮ್ಮೆ + ಒಮ್ಮೆ , ತಕ್ಕ + ಅನಿತು , ಪೊಳ್ದ+ಎಡೆ , ಇರುಳು+ಅಳಿದು , ತೆರೆದು+ಇಕ್ಕುವ ,ತಿಂಗಳಿನ + ಊರು ಚರಿಸುತ+ಅದ್ವರದ, ಲೇಖನವನು+ಓದಿ , ತೆಗೆದು+ಉತ್ತರೀಯಮಂ , ಬೇಡಬೇಡ+ಅರಸುಗಳ , ನಿಂತು+ಇರ್ದನು , ನಿಮ್ಮ + ಅರಸ ,ಬಂದು + ಅಲ್ಲದೆ ,ನಿಮ್ಮ + ಅಡಿಗಳಲಿ



downloaded from: www.kpscvaani.com

## ೨. ಆಗಮ ಸಂಧಿ

ಎರಡು ಪದಗಳನ್ನು ಕೂಡಿಸುವಾಗ ಪೂರ್ವ ಪದದ ಅಂತ್ಯಕ್ಷರದಲ್ಲಿನ ಸ್ವರವು ಲೋಪವಾಗಿ ಪೂರ್ವ ಪದದ ಅಂತ್ಯಕ್ಷರಕ್ಕೆ ಉತ್ತರ ಪದದ ಆದಿಯಲ್ಲಿನ ಸ್ವರ ಸೇರಿಕೊಂಡಾಗ ಅರ್ಥವು ಕೆಡುವಂತಿದ್ದಲ್ಲಿ ಯಕಾರವನ್ನೋ ಅಥವಾ ವಕಾರವನ್ನೋ ಹೊಸದಾಗಿ ಸೇರಿಸಿಕೊಳ್ಳಬೇಕು.

(ಸ್ವರದ ಮುಂದೆ ಸ್ವರವು ಬಂದಾಗ ಲೋಪಸಂಧಿ ಮಾಡಿದರೆ ಅರ್ಥವು ಕೆಡುವಂತಿದ್ದಲ್ಲಿ ಆ ಎರಡು ಸ್ವರಗಳ ಮಧ್ಯದಲ್ಲಿ ಯಕಾರವನ್ನೋ ಅಥವಾ ವಕಾರವನ್ನೋ ಹೊಸದಾಗಿ ಸೇರಿಸಿ ಹೇಳುತ್ತೇವೆ. ಇದಕ್ಕೆ 'ಆಗಮ ಸಂಧಿ' ಎನ್ನುವರು)

| ಆಗಮ | |
|---|---|
| ಕೈಯನ್ನು | ಮರವನ್ನು |
| ಮಳೆಯಿಂದ | ಮಗುವಿಗೆ |
| ಶಾಲೆಯಲ್ಲಿ | ವೇದಿಯಲ್ಲಿ |
| ಜಾಗವನ್ನು | ಓಣಿಯಲ್ಲಿ |
| ಭೇದವಿಲ್ಲ | |

ಕೈ + ಅನ್ನು = ಕೈ + ಯ್ + ಅನ್ನು = ಕೈಯನ್ನು ,

(ಕೈ+ಅನ್ನು ಕೂಡಿಸಿಗಾಗ ಕೈನ್ನು ಆಗುತ್ತದೆ. ಆದರೆ ಇದರ ಅರ್ಥ ಕೆಡುತ್ತದೆ. ಹಾಗೆ ಮಾಡದೆ "ಯ್ " ಅಕ್ಷರವನ್ನು ಹೊಸದಾಗಿ ಸೇರಿಸಬೇಕು.)

ಮಳೆ + ಇಂದ = ಮಳೆ + ಯ್ + ಇಂದ = ಮಳೆಯಿಂದ

ಮಗು + ಇಗೆ = ಮಗು + ವ್ + ಇಗೆ = ಮಗುವಿಗೆ

## ಆ) ಕನ್ನಡದ ವ್ಯಂಜನ ಸಂಧಿ

### ೩. ಆದೇಶ ಸಂಧಿ

ಸಂಧಿಯಾಗುವಾಗ ಒಂದು ಅಕ್ಷರದ ಸ್ಥಾನದಲ್ಲಿ (ಸ್ಥಳದಲ್ಲಿ) ಬೇರೊಂದು ಅಕ್ಷರವು ಬರುವುದೇ ಆದೇಶ ಸಂಧಿಯೆನಿಸುವುದು.

(ಸಾಮಾನ್ಯವಾಗಿ ಉತ್ತರಪದದ ಆದಿಯಲ್ಲಿರುವ ಕ ತ ಪ ವ್ಯಂಜನಗಳಿಗೆ ಕ್ರಮವಾಗಿ ಗ ದ ಬ ವ್ಯಂಜನಗಳು ಆದೇಶವಾಗಿ ಬರುತ್ತವೆ. ಕೆಲವೊಂದು ಸಲ 'ಪ ಬ ಮ ' ಗಳಿಗೆ 'ವ ' ಕಾರ ಆದೇಶವಾಗುತ್ತದೆ. ಸ ಕಾರಕ್ಕೆ ಚ ಜ ಛ ಗಳು ಆದೇಶವಾಗುತ್ತವೆ.)



downloaded from: www.kpscvaani.com

## ಆದೇಶ ಸಂಧಿ

| | | |
|---|---|---|
| ಮಳೆಗಾಲ | ಕಡುವೆಳ್ಪು | ಧೃತಿಗೆಟ್ಟು |
| ಮೈದೋರು | ಮೆಲ್ವಾತು | ಪೋಗಲ್ವೇಳ್ಕುಂ |
| ಹೊಸಗಾಲ | ಕಳ್ಗುಡಿ | ಬೆಂಬತ್ತು |
| ಕಂಗೆಟ್ಟು | ಕಂಬನಿ | ಕೈವಿಡಿದು |
| ಇಂಚರ | ಬೆಮರ್ವನಿ | ಮೈದೊಳೆ |
| ಬೆಟ್ಟದಾವರೆ | ಹೊಸಗನ್ನಡ | |

ಮಳೆ + ಕಾಲ , ಕಡು+ಬೆಳ್ಪು ,ಧೃತಿ+ಕೆಟ್ಟು , ಮೈ+ತೋರು ,ಮೇಲ್+ಮಾತು ,ಪೋಗಲ್+ಪೇಳ್ಕುಂ , ಹೊಸ+ಕಾಲ , ಕಳ್ + ಕುಡಿ , ಬೆನ್+ಪತ್ತು , ಕಣ್ + ಕೆಟ್ಟು, ಕಣ್ + ಪನಿ , ಕೈ+ಪಿಡಿದು , ಇನ್+ಸರ ,ಬೆಮರ್ + ಪನಿ ,ಮೈ+ತೊಳೆ ,ಬೆಟ್ಟದ+ತಾವರೆ , ಹೊಸ + ಕನ್ನಡ

## ಸಂಸ್ಕೃತ ಸಂಧಿಗಳು

- ✓ ಎರಡು ಸಂಸ್ಕೃತ ಶಬ್ದಗಳು ಸೇರಿ ಸಂಧಿಯಾದರೆ ಸಂಸ್ಕೃತ ಸಂಧಿ ಆಗುತ್ತದೆ.
- ✓ ಒಂದು ಸಂಸ್ಕೃತ ಶಬ್ದವು ಕನ್ನಡ ಶಬ್ದದೊಡನೆ ಸೇರಿ ಸಂಧಿಯಾದರೆ ಕನ್ನಡ ಸಂಧಿ ಆಗುತ್ತದೆ.
- ✓ ಸಂಸ್ಕೃತದಲ್ಲಿ ಸ್ವರಕ್ಕೆ ಸ್ವರ ಪರವಾದಾಗ ಸ್ವರಸಂಧಿಗಳಾಗುತ್ತವೆ.
- ✓ ವ್ಯಂಜನಕ್ಕೆ ವ್ಯಂಜನ ಪರವಾದಾಗ ವ್ಯಂಜನ ಸಂಧಿಗಳಾಗುತ್ತವೆ.

### ಅ) ಸಂಸ್ಕೃತ ಸ್ವರ ಸಂಧಿಗಳು

### ೧. ಸವರ್ಣ ದೀರ್ಘ ಸಂಧಿ

ಸವರ್ಣಸ್ವರಗಳು(ಅಆ,ಇಈ,ಉಊ ಋಋ)ಒಂದರ ಮುಂದೆ ಮತ್ತೊಂದು (ಅ+ಅ,ಅ+ಆ,ಅ+ಅ..ಇ+ಇ..) ಬಂದಾಗ ಅವೆರಡರ ಸ್ಥಾನದಲ್ಲಿ ಒಂದೇ ದೀರ್ಘಸ್ವರವು(ಆ,ಈ,ಊ) ಆದೇಶವಾಗಿ ಬರುವುದು ಸವರ್ಣ ದೀರ್ಘಸಂಧಿ

ವಿದ್ಯಾ + ಅಭ್ಯಾಸ = ವಿದ್ಯಾಭ್ಯಾಸ
(ಆ + ಅ) = ಆ



downloaded from: www.kpscvaani.com

ಇಲ್ಲಿ 'ಆ' ಎಂಬ ಸ್ವರದ ಮುಂದೆ 'ಅ' ಎಂಬ ಸ್ವರ ಬಂದಿದೆ. ಈ ಎರಡೂ ಸ್ವರಗಳು ಸವರ್ಣ ಸ್ವರಗಳು ಇವು ಹೀಗೆ ಒಂದರ ಮುಂದೆ ಒಂದು ಬಂದಿವೆ. ಅವೆರಡೂ ಹೋಗಿ ಅವುಗಳ ಸ್ಥಾನದಲ್ಲಿ ಅದೇ ಸವರ್ಣಗಳ ಒಂದು ದೀರ್ಘಸ್ವರವು ಬಂದಿದೆ.

ಉದಾಹರಣೆಗೆ:-

| ಸವರ್ಣ ದೀರ್ಘ ಸಂಧಿ | | |
|---|---|---|
| **ಮಹಾತ್ಮ** | **ಗಿರೀಶ** | **ಸುರಾಸುರ** |
| **ವಧೂಪೇತ** | **ವಾಚನಾಲಯ** | **ಸಂಗ್ರಹಾಲಯ** |
| **ನಿಜಾಶ್ರಮ** | **ವಲ್ಕಲಾವೃತ** | **ದ್ರವ್ಯಾರ್ಥಿ** |

ಮಹಾ + ಆತ್ಮ , ಗಿರಿ+ಈಶ , ಸುರ + ಅಸುರ , ವಧೂ+ಉಪೇತ , ವಾಚನ + ಆಲಯ , ಸಂಗ್ರಹ + ಆಲಯ , ನಿಜ+ಆಶ್ರಮ , ವಲ್ಕಲ + ಆವೃತ ,ದ್ರವ್ಯ +ಅರ್ಥಿ

## (೨) ಗುಣಸಂಧಿ

ಅ ಆ ಕಾರಗಳಿಗೆ ಇ ಈ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಏ' ಕಾರವೂ, ಉ ಊ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಓ' ಕಾರವೂ, ಋ ಕಾರ ಪರವಾದರೆ ಅವೆರಡರ ಸ್ಥಾನದಲ್ಲಿ 'ಅರ್' ಕಾರವೂ ಆದೇಶಗಳಾಗಿ ಬರುತ್ತವೆ. ಇದಕ್ಕೆ 'ಗುಣಸಂಧಿ' ಎಂದು ಹೆಸರು.

| ಗುಣ ಸಂಧಿ | | |
|---|---|---|
| ದೇವೇಂದ್ರ | ಜ್ಞಾನೇಶ್ವರ | ಸೂರ್ಯೋದಯ |
| ಮಹರ್ಷಿ | ಮಹೇಶ | ಮದೋನ್ಮತ್ತ |
| ಮಂಡಳೇಶ್ವರ | | |

ದೇವ + ಇಂದ್ರ , ಜ್ಞಾನ+ಈಶ್ವರ, ಸೂರ್ಯ + ಉದಯ , ಮಹಾ + ಋಷಿ , ಮಹಾ + ಈಶ
ಮದ + ಉನ್ಮತ್ತ ಮಂಡಳ + ಈಶ್ವರ



downloaded from: www.kpscvaani.com

## (೩) ವೃದ್ಧಿ ಸಂಧಿ

ಅ ಆ ಕಾರಗಳಿಗೆ ಏ ಐ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಐ' ಕಾರವೂ, ಓ ಔ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಔ' ಕಾರವೂ ಆದೇಶಗಳಾಗಿ ಬರುತ್ತವೆ. ಇದಕ್ಕೆ 'ವೃದ್ಧಿಸಂಧಿ' ಎನ್ನುವರು.

| ವೃದ್ಧಿ ಸಂಧಿ | | | |
|---|---|---|---|
| ಏಕೈಕ | ಜನೈಕ್ಯ | ವನೌಷಧಿ | ಅಷ್ಟೈಶ್ವರ್ಯ |

ಏಕ + ಏಕ , ಜನ + ಐಕ್ಯ , ವನ + ಔಷಧ , ಅಷ್ಟ + ಐಶ್ವರ್ಯ .

## (೪) ಯಣ್ ಸಂಧಿ

ಇ, ಈ, ಉ, ಊ, ಋ ಕಾರಗಳಿಗೆ ಸವರ್ಣವಲ್ಲದ ಸ್ವರ ಪರವಾದರೆ ಇ ಈ ಕಾರಗಳಿಗೆ 'ಯ್' ಕಾರವೂ, ಉ ಊ ಕಾರಗಳಿಗೆ 'ವ್' ಕಾರವೂ, ಋ ಕಾರಕ್ಕೆ 'ರ್' (ರೇಫ)ವೂ ಆದೇಶಗಳಾಗಿ ಬರುತ್ತವೆ. ಇದಕ್ಕೆ ಯಣ್ ಸಂಧಿಯೆಂದು ಹೆಸರು.

| ಯಣ್ ಸಂಧಿ | | | |
|---|---|---|---|
| ಅತ್ಯವಸರ | ಜಾತ್ಯತೀತ | ಕೋಟ್ಯಧೀಶ್ವರ | ಕೋಟ್ಯನುಕೋಟಿ |
| ಅತ್ಯಾದರ | | | |

ಅತಿ + ಅವಸರ ,ಜಾತಿ + ಅತೀತ, ಕೋಟಿ + ಅಧೀಶ್ವರ ,ಕೋಟಿ+ ಅನುಕೋಟಿ , ಅತಿ + ಆದರ

### ಆ) ಸಂಸ್ಕೃತ ವ್ಯಂಜನ ಸಂಧಿಗಳು

## (೧) ಜಶ್ತ್ವಸಂಧಿ

ಪೂರ್ವಶಬ್ದದ ಕೊನೆಯಲ್ಲಿರುವ ಕಚಟತಪ ವ್ಯಂಜನಗಳಿಗೆ ಯಾವ ವರ್ಣ ಪರವಾದರೂ ಪ್ರಾಯಶಃ ಅದೇ ವರ್ಗದ ಮೂರನೆಯ ವ್ಯಂಜನಾಕ್ಷರಗಳು ಆದೇಶಗಳಾಗಿ ಬರುತ್ತವೆ. ಇದಕ್ಕೆ ಜಶ್ತ್ವಸಂಧಿಯೆನ್ನುವರು.

| ಜಶ್ತ್ವ ಸಂಧಿ | | | |
|---|---|---|---|
| **ವಾಗ್ದೇವಿ** | **ಅಜಂತ** | **ಷಡಾನನ** | **ದಿಗಂತ** |
| **ಅಬ್ಧಿ** | **ದಿಗ್ಮಂಡಲ** | | |

ವಾಕ್+ದೇವಿ, ಅಚ್ + ಅಂತ , ಷಟ್+ ಆನನ, ದಿಕ್ + ಅಂತ , ಅಪ್ + ಧಿ , ದಿಕ್ + ಮಂಡಲ



downloaded from: www.kpscvaani.com

## (೨) ಶ್ಚುತ್ವ ಸಂಧಿ

ಸಕಾರ,ತವರ್ಗಾಕ್ಷರಗಳಿಗೆ ಶಕಾರ ಚವರ್ಗಾಕ್ಷರಗಳು ಪರವಾದಾಗ ಸಕಾರಕ್ಕೆ ಶಕಾರವೂ, ತವರ್ಗಕ್ಕೆ ಚವರ್ಗವೂ ಆದೇಶಗಳಾಗಿ ಬರುತ್ತವೆ.

'ಶ್ಚು' ಎಂದರೆ ಶಕಾರ ಚವರ್ಗಾಕ್ಷರಗಳು. (ಶ್=ಶಕಾರ, ಚು=ಚ ಛ ಜ ಝ ಞ) ಇವುಗಳು ಆದೇಶವಾಗಿ ಬರುವುದೇ ಶ್ಚುತ್ವಸಂಧಿ ಎನಿಸುವುದು.

| ಶ್ಚುತ್ವ ಸಂಧಿ | |
|---|---|
| **ಪಯಶ್ಶಯನ** | **ಶರಚ್ಚಂದ್ರ** |
| **ಜಗಜ್ಜ್ಯೋತಿ** | **ಬೃಹಚ್ಛತ್ರ** |

ಪಯಸ್ + ಶಯನ , ಶರತ್ + ಚಂದ್ರ ಜಗತ್ + ಜ್ಯೋತಿ , ಬೃಹತ್ + ಛತ್ರ

## (೩) ಅನುನಾಸಿಕ ಸಂಧಿ

ವರ್ಗ ಪ್ರಥಮ ವರ್ಣಗಳಿಗೆ ಯಾವ ಅನುನಾಸಿಕಾಕ್ಷರ ಪರವಾದರೂ, ಅವುಗಳಿಗೆ ಅಂದರೆ ಕ ಚ ಟ ತ ಪ ವ್ಯಂಜನಗಳಿಗೆ ಕ್ರಮವಾಗಿ ಙ ಞ ಣ ನ ಮ ವ್ಯಂಜನಗಳು ಆದೇಶಗಳಾಗಿ ಬರುತ್ತವೆ.

| ಅನುನಾಸಿಕ | |
|---|---|
| ಷಣ್ಮುಖ | ಸನ್ಮಾನ |
| ವಾಙ್ಮಯ | ಉನ್ಮಾದ |
| ತನ್ಮಯ | ಶ್ರೀಮನ್ಮಹಾ |

ಷಟ್+ ಮುಖ , ಸತ್ + ಮಾನ
ವಾಕ್ + ಮಯ , ಉತ್+ಮಾದ,
ತತ್+ಮಯ , ಶ್ರೀಮತ್+ಮಹಾ



downloaded from: www.kpscvaani.com

## ಮಾದರಿ ಪ್ರಶ್ನೆಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1) ಹೊಸಗನ್ನಡ ಪದವು ಈ ಸಂಧಿಗೆ ಉದಾಹರಣೆ :
(ಎ) ಲೋಪ (ಬಿ) ಆಗಮ
(ಸಿ) ಆದೇಶ (ಡಿ) ಗುಣಸಂಧಿ

2) ಸನ್ಮಾನ-ಪದವು ಈ ಸಂಧಿಗೆ ಉದಾಹರಣೆ :
(ಎ) ಅನುನಾಸಿಕಸಂಧಿ (ಬಿ) ಆಗಮಸಂಧಿ
(ಸಿ) ಜಶ್ತ್ವಸಂಧಿ (ಡಿ) ಸವರ್ಣದೀರ್ಘಸಂಧಿ

3) ಈ ಕೆಳಗಿನ ಪದಗಳಲ್ಲಿ ಗುಣಸಂಧಿಯಾಗಿರುವ ಪದ :
(ಎ) ಏಕೈಕ (ಬಿ) ಮದೋನ್ಮತ್ತ
(ಸಿ) ಅತ್ಯವಸರ (ಡಿ) ದಿಗಂತ

4) ಸವರ್ಣದೀರ್ಘಸಂಧಿ ಪದ :
(ಎ) ದ್ರವ್ಯಾರ್ಥಿ (ಬಿ) ವಾಗ್ದೇವಿ
(ಸಿ) ಮಳೆಗಾಲ (ಡಿ) ಬಲ್ಲೆನೆಂದು

5) ಪೂಳ್ದಡೆ – ಪದವು ಈ ಸಂಧಿಗೆ ಉದಾಹರಣೆಯಾಗಿದೆ :
(ಎ) ಅನುನಾಸಿಕಸಂಧಿ (ಬಿ) ಆಗಮಸಂಧಿ
(ಸಿ) ಲೋಪಸಂಧಿ (ಡಿ) ಗುಣಸಂಧಿ

6) ಇವುಗಳಲ್ಲಿ ಕನ್ನಡ ಸಂಧಿ :
(ಎ) ಅನುನಾಸಿಕಸಂಧಿ (ಬಿ) ಸವರ್ಣ ದೀರ್ಘಸಂಧಿ
(ಸಿ) ಲೋಪಸಂಧಿ (ಡಿ) ಗುಣಸಂಧಿ

7) ಕನ್ನಡದ ವ್ಯಂಜನ ಸಂಧಿ :
(ಎ) ಲೋಪ ಸಂಧಿ (ಬಿ) ಆಗಮಸಂಧಿ
(ಸಿ) ಆದೇಶ ಸಂಧಿ (ಡಿ) ಸವರ್ಣದೀರ್ಘಸಂಧಿ

8) ಇವುಗಳಲ್ಲಿ ಸಂಸ್ಕೃತ ಸಂಧಿ :
(ಎ) ಆಗಮ ಸಂಧಿ (ಬಿ) ಸವರ್ಣ ದೀರ್ಘಸಂಧಿ
(ಸಿ) ಲೋಪಸಂಧಿ (ಡಿ) ಆದೇಶ ಸಂಧಿ

9) ಕಳ್ಗುಡಿ – ಪದವು ಈ ಸಂಧಿಗೆ ಉದಾಹರಣೆಯಾಗಿದೆ :
(ಎ) ಜಶ್ತ್ವಸಂಧಿ (ಬಿ) ಯಣ್ ಸಂಧಿ
(ಸಿ) ಲೋಪಸಂಧಿ (ಡಿ) ಆದೇಶ ಸಂಧಿ

10) ಯಣ್ ಸಂಧಿಯ ಪದ :
(ಎ) ತನ್ಮಯ (ಬಿ) ಅತ್ಯಾದರ
(ಸಿ) ಪಯಶ್ಯಯನ (ಡಿ) ವಾಚನಾಲಯ



downloaded from: www.kpscvaani.com

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

11) ಮಹರ್ಷಿ : ಗುಣಸಂಧಿ :: ಷಡಾನನ : ______

12) ಒಮ್ಮೊಮ್ಮೆ: ಲೋಪಸಂಧಿ :: ಹೊಸಗಾಲ : ______

13) ಬೇಧವಿಲ್ಲ : ಆಗಮಸಂಧಿ :: ನಿಮ್ಮಡಿಗಳಲಿ : ______________

14) ಅಜಂತ : ಜಶ್ತ್ವಸಂಧಿ :: ಅತ್ಯವಸರ : _______________

15) ಲೇಖನವನೋದಿ: ಲೇಖನವನು + ಓದಿ :: ವಾಗ್ದೇವಿ : ____________

16) ಶರಚ್ಚಂದ್ರ : ಶ್ಚುತ್ವಸಂಧಿ : : ದಿಗಂತ : ____________

17) ಲೋಪಸಂಧಿ : ಸ್ವರಸಂಧಿ : : ಆದೇಶ ಸಂಧಿ : ______________

18) ಬಂದಲ್ಲದೆ : ಲೋಪಸಂಧಿ : : ದೃತಿಗೆಟ್ಟು : ________________

19) ನಿಮ್ಮರಸ : ಲೋಪಸಂಧಿ : : ವಲ್ಕಲಾವೃತ : ______________

20) ಸವರ್ಣದೀರ್ಘ ಸಂಧಿ : ಸಂಸ್ಕೃತ ಸ್ವರಸಂಧಿ : : ಆಗಮ ಸಂಧಿ : ____________

## ಉತ್ತರಗಳು :

**1) (ಸಿ) ಆದೇಶ**
**2) (ಎ) ಅನುನಾಸಿಕಸಂಧಿ**
**3) (ಬಿ) ಮದೋನ್ಮತ್ತ**
**4) (ಎ) ದ್ರವ್ಯಾರ್ಥಿ**
**5) (ಸಿ) ಲೋಪಸಂಧಿ**
**6) (ಸಿ) ಲೋಪಸಂಧಿ**
**7) (ಸಿ) ಆದೇಶ ಸಂಧಿ**
**8) (ಬಿ) ಸವರ್ಣ ದೀರ್ಘಸಂಧಿ**
**9) (ಡಿ) ಆದೇಶ ಸಂಧಿ**
**10) (ಬಿ) ಅತ್ಯಾದರ**
**11) ಜಶ್ತ್ವಸಂಧಿ**
**12) ಆದೇಶಸಂಧಿ**
**13) ಲೋಪಸಂಧಿ**
**14) ಯಣ್ ಸಂಧಿ**
**15) ವಾಕ್ + ದೇವಿ**
**16) ಜಶ್ತ್ವಸಂಧಿ**
**17) ವ್ಯಂಜನ ಸಂಧಿ**
**18) ಆದೇಶ ಸಂಧಿ**
**19) ಸವರ್ಣದೀರ್ಘ ಸಂಧಿ**
**20) ಕನ್ನಡ ಸ್ವರ ಸಂಧಿ**



downloaded from: www.kpscvaani.com

# 4.ತದ್ಧಿತಾಂತಗಳು

ನಾಮಪದಗಳಿಗೆ ಬೇರೆಬೇರೆ ಅರ್ಥಗಳಲ್ಲಿ ತದ್ಧಿತ ಪ್ರತ್ಯಯಗಳು ಸೇರಿ ಆಗುವ ಶಬ್ಧಗಳು.

ತದ್ಧಿತ ಪ್ರತ್ಯಗಳು ನಾಮಪದಗಳ ಅಂತದಲ್ಲಿ ಉಳ್ಳ ಶಬ್ದರೂಪಗಳೇ 'ತದ್ಧಿತಾಂತಗಳು'

(**ತದ್ಧಿತ ಪ್ರತ್ಯಗಳು –**ಗಾರ, ಕಾರ, ಕೋರ, ವಳ, ಗುಳಿ,ಅರ,ಆನೆಯ, ಅತಿ,ಇತ್ತಿ,ಇಗ, ಅಡಿಗ, ವಂತ, ಇಕ, ಅಳಿ,ತನ, ಇಕೆ, ಪು,ಮೆ, ಅಂತೆ, ವ್ರೊಲ್, ತನಕ,ವರೆಗೆ,ಓಸುಗ,ಆಗಿ,ಓಸ್ಕರ ಇತ್ಯಾದಿ)

**( ನಾಮಪದಗಳ ಮೇಲೆ ಮಾತ್ರ ತದ್ಧಿತ ಪ್ರತ್ಯಗಳು ಬರುತ್ತವೆ. ನಾಮಪದಗಳನ್ನು ಗುರುತಿಸಿಕೊಳ್ಳಿ)**

## ತದ್ದಿತಾಂತಗಳ ವಿಧಗಳು

| |
|---|
| 1) ತದ್ಧಿತಾಂತನಾಮ |
| 2) ತದ್ಧಿತಾಂತ ಭಾವನಾಮ |
| 3) ತದ್ಧಿತಾಂತ ಅವ್ಯಯ |

## 1) ತದ್ಧಿತಾಂತನಾಮ

**ನಾಮಪದಗಳಿಗೆ ಇಗ, ಅಡಿಗ, ಕಾರ, ಕೋರ, ಗಾರ, ವಂತ, ವಾಳ, ವಳ, ಅಳಿ,ಗುಳಿ,ಅರ, ಅನೆಯ – ಮೊದಲಾದ ತದ್ಧಿತ ಪ್ರತ್ಯಯಗಳು ಸೇರಿ ಆಗುವ ಶಬ್ಧಗಳನ್ನು ತದ್ಧಿತಾಂತನಾಮ ಎನ್ನುವರು**

**(ಗುರುತಿಸುವಿಕೆ : ಇವುಗಳು ವ್ಯಕ್ತಿಗಳನ್ನು ಸೂಚಿಸುತ್ತವೆ. ವ್ಯಕ್ತಿಗಳನ್ನು ನೆನಪಿಸಿಕೊಳ್ಳಿ)**

| ತದ್ಧಿತಾಂತನಾಮ | | | |
|---|---|---|---|
| ಪುಲ್ಲಿಂಗ | | | ಸ್ತ್ರೀಲಿಂಗ |
| • ಬಳೆಗಾರ | • ಲೆಕ್ಕಿಗ | • ಓಲೆಕಾರ | • ಬಳೆಗಾರ್ತಿ |
| • ಕೋಲುಕಾರ | • ಸಾಲಗಾರ | • ಹಾವಾಡಿಗ | • ಕೋಲುಕಾರ್ತಿ |
| • ಕನ್ನಡಿಗ | • ಗುಣವಂತ | • ಲಂಚಕೋರ | • ಕನ್ನಡತಿ |
| • ಸಿರಿವಂತ | • ಬುದ್ಧಿವಂತ | • ಹೂವಾಡಿಗ | • ಸಿರಿವಂತೆ |
| • ಒಕ್ಕಲಿಗ | • ಮಡಿವಾಳ | • ಕುಂಬಾರ | • ಒಕ್ಕಲಗಿತ್ತಿ |
| • ಮಾಲೆಗಾರ | • ವಾಚಾಳಿ | • ಸಾಲಗಾರ | • ಮಾಲೆಗಾರ್ತಿ |
| • ಬೇಟೆಗಾರ | • ಲಂಚಗುಳಿ | | |

downloaded from: www.kpscvaani.com

## 2) ತದ್ಧಿತಾಂತ

ನಾಮಪದಗಳ ಮುಂದೆ ಭಾವಾರ್ಥಗಳಲ್ಲಿ – ತನ,ಇಕೆ,ಪು,ಮೆ, ಮೊದಲಾದ ತದ್ಧಿತ ಪ್ರತ್ಯಯಗಳು ಸೇರಿ ಆಗುವ ಶಬ್ಧಗಳನ್ನು ತದ್ಧಿತಾಂತಭಾವನಾಮ ಎನ್ನುವರು

(ಗುರುತಿಸುವಿಕೆ : ವ್ಯಕ್ತಿಯ ಸ್ಥಿತಿಯನ್ನು ನೆನೆಪಿಸುತ್ತವೆ.)

| ತದ್ಧಿತಾಂತ ಭಾವನಾಮ | |
|---|---|
| • ಜಾಣತನ | • ಜಾಣ್ಮೆ |
| • ಚೆಲುವಿಕೆ | • ಹಿರಿಮೆ |
| • ಕಪ್ಪು | • ದೊಡ್ಡತನ |
| • ಪೆರ್ಮೆ | • ಬಡತನ |
| • ಸಿರಿತನ | • ಹೊಸತನ |

## 3) ತದ್ಧಿತಾಂತ ಅವ್ಯಯ

ನಾಮಪದಗಳ ಮುಂದೆ ಅಂತೆ, ವೋಲ್, ವೋಲು, ತನಕ, ವರೆಗೆ, ಇಂತ, ಆಗಿ, ಓಸುಗ, ಮುಂತಾದ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತ ಅವ್ಯಯಗಳಾಗುತ್ತವೆ.

(ಗುರುತಿಸುವಿಕೆ : ತದ್ಧಿತಾಂತ ಅವ್ಯಯಗಳಾದ ಮೇಲೆ ವಿಭಕ್ತಿ ಪ್ರತ್ಯಯಗಳನ್ನು ಹಚ್ಚಿದರೆ ಸೇರುವುದಿಲ್ಲ ಗಮನಿಸಿ)

| ತದ್ಧಿತಾಂತ ಅವ್ಯಯ | |
|---|---|
| • ಚಂದ್ರನಂತೆ | • ಅವನಂತೆ |
| • ಚಂದ್ರನವೋಲ್ | • ಅವನವೋಲ್ |
| • ನನ್ನವೋಲು | • ಅವಳವೋಲು |
| • ಮನೆಯವೋಲು | • ಇದರವೋಲ್ |
| • ಕರಡಿವೋಲ್ | • ನದಿಯವೋಲ್ |
| • ಮನೆಯತನಕ | • ಹಿಮಾಲಯದತನಕ |
| • ಶಾಲೆಯವರೆಗೆ | • ಪಟ್ಟಣದವರೆಗೆ |
| • ಇವಳಮಟ್ಟಿಗೆ | • ಸುಂದರನಮಟ್ಟಿಗೆ |
| • ನನಗೋಸ್ಕರ | • ಬೆಕ್ಕಿಗೋಸ್ಕರ |
| • ರಾಧೆಗಿಂತ | • ಅದಕ್ಕಿಂತ |
| • ನಿನಗಾಗಿ | • ಇದಕ್ಕಾಗಿ |
| • ಮದುವೆಗೋಸುಗ | • ಕಾಗೆಗೋಸುಗ |

downloaded from: www.kpscvaani.com

# 5.ಕೃದಂತಗಳು

ಧಾತುಗಳಿಗೆ ಕೃತ್ ಪ್ರತ್ಯಯಗಳು ಸೇರಿ ಕೃದಂತಗಳಾಗುತ್ತವೆ.

ಧಾತು : ಕ್ರಿಯಾಪದದ ಮೂಲರೂಪ ಧಾತು

(ಕ್ರಿಯಾಪದಗಳನ್ನು ನೆನಪಿಸಿಕೊಳ್ಳಿ )

ಉದಾ: ಓಡು , ತಿನ್ನು , ಬರೆ

**ಕೃದಂತಗಳ ವಿಧಗಳು**

| |
|---|
| 1) ಕೃದಂತನಾಮ |
| 2) ಕೃದಂತ ಭಾವನಾಮ |
| 3) ಕೃದಂತಾವ್ಯಯ |

## 1) ಕೃದಂತನಾಮ

ಧಾತುಗಳಿಗೆ ಕರ್ತೃ ಮೊದಲಾದ ಅರ್ಥದಲ್ಲಿ ಸಾಮಾನ್ಯವಾಗಿ 'ಅ' ಎಂಬ ಕೃತ್ಯ ಪ್ರತ್ಯಯ ಸೇರಿ ಆಗುವ ಪದಗಳನ್ನು' ಕೃದಂತನಾಮಗಳು ' ಎನ್ನುವರು. ಧಾತುವಿಗೂ ಕೃತ್ ಪ್ರತ್ಯಯಕ್ಕೂ ಮಧ್ಯದಲ್ಲಿ ಕಾಲಸೂಚಕ ಪ್ರತ್ಯಯಗಳು ಸೇರಿಕೊಳ್ಳುತ್ತವೆ

ಉದಾ: ಓಡು+ವ+ಅ= ಓಡವ , ಓಡು+ದ+ಅ=ಓಡಿದ , ಓಡ+ಅದ+ಅ=ಓಡದ

(ಗುರುತಿಸುವಿಕೆ : ಧಾತುಗಳ ಮೇಲೆ ಕಾಲಸೂಚಕ ಪ್ರತ್ಯಯಗಳು (ವ,ಉವ,ದ,ಅದ) ಬಂದು ಕೃತ್ ಪ್ರತ್ಯಯಗಳು (ಅ) ಕೊನೆಯಲ್ಲಿ ಇರುತ್ತವೆ. ವ್ಯಕ್ತಿಯ ಕ್ರಿಯೆಯನ್ನು ನೆನಪಿಸಿಕೊಳ್ಳಿ )

| ವರ್ತಮಾನ ಕೃದಂತ | ಭೂತ ಕೃದಂತ | ನಿಷೇಧ ಕೃದಂತ |
|---|---|---|
| ' ವ ' ' ಉವ ' | ' ದ ' | ' ಅದ ' |
| • ಮಾಡುವ | • ಮಾಡಿದ | • ಮಾಡದ |
| • ಓಡುವ | • ಓಡಿದ | • ಓಡದ |
| • ಬಾಳುವ | • ಬಾಳಿದ | • ಬಾಳದ |
| • ಬರೆಯುವ | • ಬರೆದ | • ಬರೆಯದ |
| • ತಿನ್ನುವ | • ತಿಂದ | • ತಿನ್ನದ |
| • ನಡೆಯುವ | • ನಡೆದ | • ನಡೆಯದ |



downloaded from: www.kpscvaani.com

## 2) ಕೃದಂತ ಭಾವನಾಮ

ಧಾತುಗಳಿಗೆ ಭಾವಾರ್ಥದಲ್ಲಿ ಇಕೆ,ಇಗೆ,ಗೆ,ತ,ಟ,ಇತ,ಅವು,ವು,ಕೆ,ತೆ,ಪು,ವಳಿಕೆ,ವಣಿಗೆ ಮುಂತಾದ ಕೃತ್ ಪ್ರತ್ಯಯಗಳು ಸೇರಿ ಕೃದಂತ ಭಾವನಾಮಗಾಗುತ್ತವೆ.

(ಗುರುತಿಸುವಿಕೆ : ಕ್ರಿಯೆಯ ಭಾವವನ್ನು ನೆನೆಯಿರಿ . ಉದಾ : ಓಡುವ ಕ್ರಿಯೆಯ ಭಾವ –ಓಟ)

| | |
|---|---|
| • ಓಟ | • ನೋಟ |
| • ಬಾಳುವಿಕೆ | • ಬರೆಯುವಿಕೆ |
| • ಅಂಜಿಕೆ | • ನಂಬಿಕೆ |
| • ಉಡುಗೆ | • ತೊಡುಗೆ |
| • ನಗುವುದು | • ತಿನ್ನುವುದು |
| • ನೆನಪು | • ಮೆರವಣಿಗೆ |
| • ಹೋಲಿಗೆ | • ನೋವು |
| • ಮಾಟ | • ತಿನ್ನುವಿಕೆ |
| • ನಡೆತ | • ಒಪ್ಪಿತ |
| • ಕೊರೆತ | • ಓಟ |

## 3) ಕೃದಂತಾವ್ಯಯ

ಧಾತುಗಳ ಮೇಲೆ ಉತ್ತ, ಅದೆ, ದರೆ, ಅಲು, ಅಲಿಕೆ, ಅ, ಇ, ದು ಇತ್ಯಾದಿ ಪ್ರತ್ಯಯಗಳು ಸೇರಿ ಕೃದಂತಾವ್ಯಗಳಾಗುತ್ತವೆ.

(ಗುರುತಿಸುವಿಕೆ : ಕೃದಂತಾವ್ಯಯಗಳಾದ ನಂತರ ವಿಭಕ್ತಿ ಪ್ರತ್ಯಯ ಹತ್ತುವುದಿಲ್ಲ ಮಾಡಿನೋಡಿ)

(ಇವುಗಳನ್ನು ಬಳಸಿಕೊಂಡುವಾಕ್ಯ ರಚಿಸಿದರೆ( ಸ್ತ್ರೀಲಿಂಗ,ಪುಲ್ಲಿಂಗ /ಕಾಲ/ವಚನ ದಲ್ಲೂ ಬದಲಾಗುವುದಿಲ್ಲ)

| | |
|---|---|
| • ಮಾಡುತ್ತ | • ತಿನ್ನುತ್ತ |
| • ಮಾಡದೆ | • ಬರದೆ |
| • ಮಾಡಲು | • ನೋಡಲು |
| • ಮಾಡಲಿಕ್ಕೆ | • ಕೇಳಿ |
| • ಮಾಡ | • ಕೇಳಲಿಕ್ಕೆ |
| • ಮಾಡಿ | • ನೋಡ |
| • ಬರೆದು | • ಮಾಡುತ |
| • ತಿಂದು | • ನಡೆಯುತ್ತ |
| • ನೋಡುತ್ತ | • ಓಡಿ |

downloaded from: www.kpscvaani.com

## ಮಾದರಿ ಪ್ರಶ್ನೆಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1) ವರ್ತಮಾನ ಕೃದಂತನಾಮಕ್ಕೆ ಈ ಪದವು ಉದಾಹರಣೆಯಾಗಿದೆ.
ಎ) ಬರೆಯುವ ಬಿ) ಬರೆದ ಸಿ) ಬರೆಯದ ಡಿ) ಬರೆಹ

2) 'ನೋಟ' ಎಂಬುದು ಈ ವ್ಯಾಕರಣಾಂಶವಾಗಿದೆ.
ಎ) ಕೃದಂತನಾಮ ಬಿ) ಕೃದಂತಭಾವನಾಮ ಸಿ) ಕೃದಂತಾವ್ಯಯ ಡಿ) ತದ್ಧಿತಾಂತ

3) ಇವುಗಳಲ್ಲಿ ಕೃದಂತಾವ್ಯಯಕ್ಕೆ ಉದಾಹರಣೆಯಾದ ಪದ.
ಎ) ತೊಡುಗೆ ಬಿ) ತಿನ್ನುವಿಕೆ ಸಿ) ನಡೆಯುವ ಡಿ) ಮಾಡಲಿಕ್ಕೆ

4) ತದ್ಧಿತಾಂತನಾಮಕ್ಕೆ ಉದಾಹರಣೆ :
(ಎ) ಬಳೆಗಾರ (ಬಿ) ಸಿರಿತನ (ಸಿ) ಚಂದ್ರನಂತೆ (ಡಿ) ಕಪ್ಪು

5) ಇದೊಂದು ಕೃದಂತನಾಮ ಪದ :
(ಎ) ಓಟ (ಬಿ) ಓಡುವ (ಸಿ) ಮೆರವಣಿಗೆ (ಡಿ) ನೋಡಲು

6) ಈ ಕೆಳಗಿನ ಪದಗಳಲ್ಲಿ ತದ್ಧಿತಾಂತ ಭಾವನಾಮಕ್ಕೆ ಉದಾಹರಣೆ :
(ಎ) ಬಡತನ (ಬಿ) ಮಡಿವಾಳ (ಸಿ) ರಾಧೆಗಿಂತ (ಡಿ) ಬರೆಯುವ

7) ತದ್ಧಿತಾಂತ ನಾಮಪದ :
(ಎ) ವಾಚಾಳಿ (ಬಿ) ಪೆರ್ಮೆ (ಸಿ) ಅಂಜಿಕೆ (ಡಿ) ತಿನ್ನುತ್ತ

8) ತದ್ಧಿತಾಂತ ಅವ್ಯಕ್ಕೆ ಉದಾಹರಣೆಯಾಗಿದೆ :
(ಎ) ಮಾಲೆಗಾರ್ತಿ (ಬಿ) ನೋಟ (ಸಿ) ಶಾಲೆಯವರೆಗೆ (ಡಿ) ಜಾಣತನ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

9) ನೆನಪು : ಕೃದಂತಭಾವನಾಮ :: ಹಿರಿಮೆ : ______

10) ಸಿರಿತನ : ತದ್ಧಿತಾಂತ ಭಾವನಾಮ :: ಮಾಟ : ______

11) ನಡೆಯುತ್ತ : ಕೃದಂತಾವ್ಯಯ :: ಪಟ್ಟಣದವರೆಗೆ : ______________

12) ಓಡು : ಓಟ :: ನೆನೆ :_______________

13) ಬಳೆಗಾರ : ಬಳೆಗಾರ್ತಿ :: ಒಕ್ಕಲಿಗ :____________

14) ಅಂಜಿಕೆ : ಕೃದಂತ ಭಾವನಾಮ : : ಜಾಣ್ಮೆ : ___________

15) ಬಾಳಿದ : ಭೂತ ಕೃದಂತ : : ಓಡದ _______________

### ಉತ್ತರಗಳು :

**1) ಎ) ಬರೆಯುವ 2) ಬಿ) ಕೃದಂತಭಾವನಾಮ 3) ಡಿ) ಮಾಡಲಿಕ್ಕೆ 4) (ಎ) ಬಳೆಗಾರ**
**5) (ಬಿ) ಓಡುವ 6) (ಎ) ಬಡತನ 7) (ಎ) ವಾಚಾಳಿ 9) (ಸಿ) ಶಾಲೆಯವರೆಗೆ**
**9) ತದ್ಧಿತಾಂತ ಭಾವನಾಮ 10) ಕೃದಂತ ಭಾವನಾಮ 11) ತದ್ಧಿತಾಂತಾವ್ಯಯ 12) ನೆನಪು**
**13) ಒಕ್ಕಲಗಿತ್ತಿ 14) ತದ್ಧಿತಾಂತ ಭಾವನಾಮ 15) ನಿಷೇಧ ಕೃದಂತ**



downloaded from: www.kpscvaani.com

# 6.ದ್ವಿರುಕ್ತಿಗಳು

- ✓ ಒಂದು ಪದವನ್ನು ಎರಡೆರಡು ಬಾರಿ ಉಪಯೋಗಿಸುವುದಕ್ಕೆ ದ್ವಿರುಕ್ತಿ ಎನ್ನುತ್ತಾರೆ.
- ✓ ಒಂದು ಪದಭಾಗವನ್ನು ಎರಡೆರಡು ಬಾರಿ ಉಪಯೋಗಿಸುವುದಕ್ಕೆ ದ್ವಿರುಕ್ತಿ ಎನ್ನುತ್ತಾರೆ.
- ✓ ದ್ವಿ–ಎಂದರೆ ಎರಡು ಉಕ್ತಿ–ಎಂದರೆ ಮಾತು ಒಂದು ಮಾತನ್ನು ಎರಡೆರಡು ಬಾರಿ ಉಪಯೋಗಿಸುವುದಕ್ಕೆ ದ್ವಿರುಕ್ತಿ ಎನ್ನುತ್ತಾರೆ.
- ✓ ಒಂದು ವಿಷೇಷಾರ್ಥವನ್ನು ವ್ಯಕ್ತಪಡಿಸುವುದಕ್ಕೆ ಒಂದು ಪದವನ್ನೋ, ಒಂದು ವಾಕ್ಯವನ್ನೋ ಎರಡೆರಡು ಬಾರಿ ಪ್ರಯೋಗ ಮಾಡುವುದಕ್ಕೆ ದ್ವಿರುಕ್ತಿ ಎನ್ನುತ್ತಾರೆ.

## ದ್ವಿರುಕ್ತಿಗಳು

| | | | |
|---|---|---|---|
| ಹೌದು ಹೌದು | ನಿಲ್ಲು ನಿಲ್ಲು | ಬಂದೆ ಬಂದೆ | ದೊಡ್ಡ ದೊಡ್ಡ |
| ಹೆಚ್ಚುಹೆಚ್ಚು | ಮನೆಮನೆಗಳಲ್ಲಿ | ಕೇರಿ ಕೇರಿಗಳನ್ನು | ಅಗೋಅಗೋ |
| ಬನ್ನಿಬನ್ನಿ | ಅಬ್ಬಬ್ಬಾ | ಅಹಹಾ | ಬೇಡಬೇಡ |
| ನಡೆನಡೆ | ಸಾಕುಸಾಕು | ಹೌದ್ಹೌದು | ಆಗಲಿ ಆಗಲಿ |
| ಇರಲಿರಲಿ | ಓಡುಓಡು | ನಡೆನಡೆ | ಓಡಿಓಡಿ |
| ಈಗೀಗ | ದೊಡ್ಡದೊಡ್ಡ | ಮೊದಮೊದಲು | ಮೊತ್ತಮೊದಲು |
| ಮೊಟ್ಟಮೊದಲು | ಕಡೆಗೆಕಡೆಗೆ | ಕಟ್ಟಕಡೆಗೆ | ಕಡೆಕಡೆಗೆ |
| ನಡುವೆನಡುವೆ | ನಟ್ಟನಡುವೆ | ನಡುನಡುವೆ | ಬಯಲುಬಯಲು |
| ಬಟ್ಟಬಯಲು | ತುದಿ ತುದಿ | ತುತ್ತತುದಿ | ಕೊನೆಗೆಕೊನೆಗೆ |
| ಕೊನೆಕೊನೆಗೆ | ಕೊತ್ತಕೊನೆಗೆ | ಮೆಲ್ಲನೆಮೆಲ್ಲನೆ | ಮೆಲ್ಲಮೆಲ್ಲನೆ |
| ನಮೋ ನಮೋ | ಹೆಜ್ಜೆ ಹೆಜ್ಜೆಗೆ | ಇರುಳಿರುಳು | ಗಾವುದಗಾವುದ |
| ಗರಿಗರಿ | ಬಣ್ಣಬಣ್ಣಗಳ | ಯುಗ–ಯುಗಗಳ | ಖಂಡಖಂಡಗಳ |
| ದಿನದಿನ | ಒಬ್ಬೊಬ್ಬ | ಊರೂರು | ದುಂಡುದುಂಡಾದ |
| ಹತ್ತಿರತ್ತಿರ | ನೋಡುನೋಡು | ಸಲಸಲಕ್ಕೂ | ಬೇಗಬೇಗ |
| ಒಂದೊಂದು | ಓಡೋಡು | ತಿರುತಿರುಗಿ | ಸುಡುಸುಡು |
| ಒಳಗೊಳಗೆ | ಹಣ್ಣುಹಂಪಲು | ತಿರುತಿರ್ವಿ | ಬೆನ್ನಬೆನ್ನತ್ತಿ |



downloaded from: www.kpscvaani.com

## 7.ಜೋಡುನುಡಿಗಳು

ಒಂದು ಪದದ ಜೊತೆ ಪ್ರಾಸಕ್ಕಾಗಿ ಕೆಲವೊಮ್ಮೆ ಮತ್ತೊಂದು ಪದ ಬಳಸುವುದುಂಟು. ಆ ಪದವನ್ನು ಜೋಡಿಪದ ಎನ್ನುವರು.

| | | |
|---|---|---|
| ಸತಿಪತಿ | ಕೆನೆ ಮೊಸರು | ಹಾಲ್ಜೇನು |
| ಮಕ್ಕಳುಮರಿ | ಸೊಪ್ಪುಸದೆ | ಬಟ್ಟೆಬರೆ |
| ಬಿಳಿಹೊಳೆ | ಕರಿನರೆ | ಮನೆಮಠ |
| | | |
| | | |

### ಪ್ರತಿಧ್ವನಿ ಶಬ್ದಗಳು/ಮಾತಿಗೊಂದು ಗೀತು

ಇಲ್ಲಿ ಮೊದಲ ಪದಕ್ಕೆ ಮಾತ್ರ ಅರ್ಥವಿದ್ದು ಜೊತೆಗಿರುವ ಪದಕ್ಕೆ ಅರ್ಥವಿರುವುದಿಲ್ಲ

| | | |
|---|---|---|
| ಕಾಫಿ-ಗೀಫಿ | ಹುಳುಹುಪ್ಪಡಿ | ದೇವರು ಗೀವರು |
| ಹಣಗಿಣ | ಪುಸ್ತಕಗಿಸ್ತಕ | ಹಾಲು-ಗೀಲು |

## 8.ಅನುಕರಣಾವ್ಯಗಳು

- ಅರ್ಥವಿಲ್ಲದ ಧ್ವನಿವಿಶೇಷಗಳನ್ನು ಅನುಕರಣಾವ್ಯಯಗಳು ಎನ್ನಲಾಗುತ್ತದೆ.
- ಧ್ವನಿಯನ್ನು ಅನುಕರಣೆ ಮಾಡಿ ಹೇಳುವ ಶಬ್ಧಗಳು ಅನುಕರಣಾವ್ಯಯಗಳು

| | | |
|---|---|---|
| ಚಟಚಟ | ಕರಕರ | ಚುರುಚುರು |
| ಧಗಧಗ | ರೊಯ್ಯನೆ | ಸುಯ್ಯನೆ |
| ಘುಳುಘುಳು | ದಡದಡ | ಪಟಪಟ |
| ಸರಸರ | ಗುಜುಗುಜು | ಫಳಫಳ |
| ಝುಣಝುಣ | ಜುಳುಜುಳು | ಢಣಢಣ |
| ಘಮಘಮ | ಲಕಲಕ | ಚುಮುಚುಮು |



downloaded from: www.kpscvaani.com

# 9.ತತ್ಸಮ–ತದ್ಭವ

- ✓ ಸಂಸ್ಕೃತದಿಂದ ನೇರವಾಗಿ ಕನ್ನಡದಲ್ಲಿ ಬಳಸುವ ಶಬ್ದಗಳು ತತ್ಸಮ
- ✓ ಸಂಸ್ಕೃತದಿಂದ ಅಲ್ಪ–ಸ್ವಲ್ಪ ಬದಲಾವಣೆಯಾಗಿ ಕನ್ನಡದಲ್ಲಿ ಬಳಸುವ ಶಬ್ದಗಳು ತದ್ಭವ

| ತತ್ಸಮ–ತದ್ಭವ | ತತ್ಸಮ–ತದ್ಭವ | ತತ್ಸಮ–ತದ್ಭವ | ತತ್ಸಮ–ತದ್ಭವ |
|---|---|---|---|
| ಗ್ರಹ – ಗರ | ವಸಂತ–ಬಸಂತ | ಶ್ರೀ – ಸಿರಿ | ಚಂದ್ರ – ಚಂದಿರ |
| ಕಾವ್ಯ – ಕಬ್ಬ | ಶಶಿ –ಸಸಿ | ಅಂಕುಶ –ಅಂಕುಸ | ವರ್ಷ – ವರುಷ |
| ಶಿರ –ಸಿರ | ಕಲಸ – ಕಳಸ | ವಿದ್ಯಾಧರ –ಬಿಜ್ಜೋಧರ | ವೈಶಾಖ – ಬೇಸಗೆ |
| ದ್ಯೂತ – ಜೂಜು | ವಂಧ್ಯಾ – ಬಂಜೆ | ಅರ್ಕ – ಎಕ್ಕ | ಚೀರ –ಸೀರೆ |
| ಕುಠಾರ – ಕೊಡಲಿ | ಪಾದುಕಾ – ಹಾವುಗೆ | ವಂಶ – ಬಂಚ | ಸ್ಥಾನ – ಠಾಣ |
| ತಪಸ್ವಿ – ತವಸಿ | ದೃಷ್ಟಿ – ದಿಟ್ಟಿ | ಕಾರ್ಯ – ಕಜ್ಯ | ವ್ಯಯ – ಬೀಯ |
| ಯಶ – ಜಶ | ಪಟ್ಟಣ – ಪತ್ತನ | ಸಂದೇಹ – ಸಂದೆಯ | ಪಕ್ಷಿ – ಹಕ್ಕಿ |
| ವ್ಯಾಪಾರಿ – ಬೇಹಾರಿ | ಕೋಕಿಲಾ – ಕೋಗಿಲೆ | ಯುಗ – ಜುಗ | ಅಂಗಳ –ಅಂಕಣ |
| ಬಣ್ಣ – ವರ್ಣ | ಬ್ರಮ್ಮ – ಬೊಮ್ಮ | ಯುದ್ಧ –ಜುದ್ಧ | ಆರ್ಯ–ಅಜ್ಜ |
| ಪ್ರಸಾದ – ಹಸಾದ | ದಾತೃ – ದಾತಾರ | ಪ್ರತಿಹಾರಿ–ಪಡಿಯರಿ | ಕವಿ – ಕಬ್ಬಿಗ |
| ವೀರ – ಬೀರ | ಯಜ್ಞ – ಜನ್ನ | ರಾಜ – ರಾಯ | ವಿಜ್ಞಾನ – ಬಿನ್ನಾಣ |
| ವಿಜ್ಞಾಪನೆ – ಬಿನ್ನಹ | ಸುಧೆ – ಸೊದೆ | ದಿಶೆ – ದಿಶಾ | ಶುನಕ – ಸೊಣಗ |
| ಸಾಮಂತ – ಸಾವಂತ | ತಟ – ತಡಿ | ಕಣಿ – ಗಣಿ | ಅಟವಿ – ಅಡವಿ |
| ಮುಖಶಾಲೆ – ಮೊಗಸಾಲ | ಅಮೃತ – ಅಮರ್ದು | ಪುಣ್ಯ –ಹೂನ್ಯ | ಭಕ್ತ – ಬಕುತ |
| ದೀಪಿಕಾ – ದೀವಿಗೆ | ಧರ್ಮ – ಧಮ್ಮ | | |



downloaded from: www.kpscvaani.com

## ಮಾದರಿ ಪ್ರಶ್ನೆಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1) ಈಗೀಗ –ಇದು ಯಾವ ವ್ಯಾಕರಣಾಂಶಕ್ಕೆ ಉದಾಹರಣೆ :
(ಎ) ಜೋಡುನುಡಿ (ಬಿ) ದ್ವಿರುಕ್ತಿ
(ಸಿ) ಅನುಕರಣಾವ್ಯಯ (ಡಿ) ನುಡಿಗಟ್ಟು

2) ಈ ಪದಗಳಲ್ಲಿ ದ್ವಿರುಕ್ತಿ ಪದವನ್ನು ಗುರುತಿಸಿ ಬರೆಯಿರಿ :
(ಎ) ಬೇಗಬೇಗ (ಬಿ) ಸರಸರ
(ಸಿ) ಸತಿಪತಿ (ಡಿ) ಹಾಲ್ಜೇನು

3) ಅನುಕರಣಾವ್ಯಕ್ಕೆ ಉದಾಹರಣೆ ಉದಾಹರಣೆ :
(ಎ) ಬಿಳಿಹೊಳೆ (ಬಿ) ದುಂಡುದುಂಡಾದ
(ಸಿ) ಸುಡುಸುಡು (ಡಿ) ಧಗಧಗ

4) ಜೋಡುನುಡಿಗೆ ಉದಾಹರಣೆ :
(ಎ) ಸತಿಪತಿ (ಬಿ) ಸರಸರ
(ಸಿ) ಊರೂರು (ಡಿ) ಧಗಧಗ

**5)** 'ಅಮೃತ' ಪದದ ತದ್ಭವ ರೂಪ :
(ಎ) ಜೇನು (ಬಿ) ಅಮರ್ದು
(ಸಿ) ಅಮಳ (ಡಿ) ಹಾಲು

6) ಬೆನ್ನಬೆನ್ನತ್ತಿ –ಇದು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :
(ಎ) ಅನುಕರಣಾವ್ಯಯ (ಬಿ) ದ್ವಿರುಕ್ತಿ
(ಸಿ) ಜೋಡುನುಡಿ (ಡಿ) ದಿಗ್ವಾಚಕ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

7) ವಿಜ್ಞಾನ : ಭಿನ್ನಾಣ :: ವ್ಯಾಪಾರಿ : _________________

8) ವಂಶ : ಬಂಚ : : ಚೇರ : __________________

9) ಕರಿನರೆ : ಜೋಡುನುಡಿ : : ಇರುಳಿರುಳು : _____________

10) ಹಾಲ್ಜೇನು : ಜೋಡುನುಡಿ :: ಗುಜುಗುಜು : _______________

11) ನಟ್ಟನಡುವೆ : ದ್ವಿರುಕ್ತಿ : : ಕರಿನರೆ : ___________

12) ಕಟ್ಟಕಡೆಗೆ : ಕಡೆಗೆ ಕಡೆಗೆ : : ಮೊತ್ತಮೊದಲು : ___________

13) ನಮೋ ನಮೋ : ದ್ವಿರುಕ್ತಿ : : ಧೀರ ಶೂರ : ______________

14) ಕಬ್ಬ : ಕಾವ್ಯ : : ಬೇಹಾರಿ : _______________

15) ಯುದ್ಧ : ಜುದ್ಧ : : ಪ್ರಸಾದ : ___________

*******************************************************************************************



downloaded from: www.kpscvaani.com

ಉತ್ತರಗಳು :

1) (ಬಿ) ದ್ವಿರುಕ್ತಿ 2) (ಎ) ಬೇಗಬೇಗ 3) (ಡಿ) ಧಗಧಗ 4) (ಎ) ಸತಿಪತಿ 5) (ಬಿ) ಅಮರ್ದು
6) (ಬಿ) ದ್ವಿರುಕ್ತಿ 7) ಬೇಹಾರಿ 8) ಸೀರೆ 9) ದ್ವಿರುಕ್ತಿ 10) ಅನುಕರಣಾವ್ಯಯ 11) ಜೋಡುನುಡಿ
12) ಮೊದಲು ಮೊದಲು 13) ಜೋಡುನುಡಿ 14) ವ್ಯಾಪಾರಿ 15) ಹಸಾದ

## 10.ಅನ್ಯದೇಶಿ ಪದಗಳು

| ಗ್ರೀಕ್ ಮತ್ತು ರೋಮನ್ | ಪರ್ಶಿಯನ್ (ಪಾರ್ಶಿ) | ಅರಬ್ಬಿ | ಪೋರ್ಚುಗೀಸ್ | ಉರ್ದು | ಹಿಂದುಸ್ಥಾನಿ | ಇಂಗ್ಲೀಷ್ |
|---|---|---|---|---|---|---|
| ದಮ್ಮಡಿ | ಅಬಕಾರಿ | ಅಮಾನತು | ಮೇಜು | ಕಿಮ್ಮತ್ತು | ಅರ್ಜಿ | ಬಸ್ಸು |
| ದಮಡಿ | ರಸ್ತೆ | ಅಸಲು | ತಂಬಾಕು | ತಾರೀಖು | ಕಛೇರಿ | ಕಾರು |
| ದಮ್ಮ | ದವಾಖಾನೆ | ಇನಾಮು | ಅನಾನಸು | ತಾಲೂಕು | ಕಾರ್ಖಾನೆ | ಕಾಲೇಜು |
| ದಿನಾರ | ಚೌಕಾಸಿ | ಕಾಯ್ದೆ | ಸಾಬೂನು | ಅಹವಾಲು | ಸಲಾಮು | ಸೈಟು |
| ಗದ್ಯಾಣ | ಜಮೀನು | ಗಲೀಜು | ಆಸ್ಪತ್ರೆ | ಇಲಾಖೆ | ದರ್ಬಾರು | ಪೆನ್ನು |
| | ಅಜಮಾಹಿಸಿ | ತಕರಾರು | ಚೊಂಬು | ದರ್ಜೆ | ಕುರ್ಚಿ | ಸ್ಯಾನಿಟರಿ |
| | ಆಮದು | ತರಬೇತು | ಚಾ | ಬಂದೂಕು | ಕಾಗದ | ಸೋಪು |
| | ದಲ್ಲಾಳಿ | ನಕಲಿ | ಇಸ್ತ್ರಿ | ರುಜು | ಹುಕುಂ | ಡಿಪ್ಲೋಮಾ |
| | ಮಸಲತ್ತು | | ರಸೀದಿ | ಶುರು | | ಬ್ಲಾಕ್ ಔಟ್ |
| | ದಿವಾನ | | | ಶಾಮೀಲು | | ಡಾಕ್ಟರ್ |
| | ಸರಕಾರ | | | ದಾಖಲೆ | | ರಿಜೆಂಟ್ |
| | | | | ಜುಲ್ಮಾನೆ | | |

## 11.ಗ್ರಾಂಥಿಕ ರೂಪ

| | |
|---|---|
| ➢ ಹೀಂಗ | ✓ ಹೀಗೆ |
| ➢ ಕಳುವ್ಯಾರೆ | ✓ ಕಳುಹಿಸಿದ್ದಾರೆ |
| ➢ ಇಲ್ಲದ್ಹಂಗ | ✓ ಇಲ್ಲದಹಾಗೆ |
| ➢ ಇಸವಾಸ | ✓ ವಿಶ್ವಾಸ |
| ➢ ಸಕ್ಕಾರಿ | ✓ ಸಕ್ಕರೆ |

downloaded from: www.kpscvaani.com

# 12.ವಾಕ್ಯ ಪ್ರಕಾರಗಳು

ಕರ್ತೃ , ಕರ್ಮ ಮತ್ತು ಕ್ರಿಯಾಪದಗಳಿಂದ ಕೂಡಿರುವ ಪದ ಸಮೂಹವೇ ವಾಕ್ಯ ಎಂದೆನಿಸುವುದು.

ಒಂದು ಸಂಪೂರ್ಣ ಅರ್ಥ ನೀಡುವ ಪದಗಳ ವ್ಯವಸ್ಥಿತ ಜೋಡಣೆಯೇ ವಾಕ್ಯ.

**ವಾಕ್ಯಪ್ರಕಾರಗಳಲ್ಲಿ 3 ವಿಧಗಳಿವೆ.**

1) **ಸಾಮಾನ್ಯ ವಾಕ್ಯ**

2) **ಸಂಯೋಜಿತ ವಾಕ್ಯ (ಸಂಯುಕ್ತ ವಾಕ್ಯ )**

3) **ಮಿಶ್ರ ವಾಕ್ಯ**

**1) ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವನ್ನು ಸಾಮಾನ್ಯ ವಾಕ್ಯವೆಂದು ಕರೆಯುತ್ತಾರೆ.**

- ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತು.
- ಕಾರವಾರದಲ್ಲಿ ಉದ್ಯೋಗಿಯಾಗಿದ್ದ ವೀರೇಶ್ವರ ಪಾಠಕ್ ಮಲೇರಿಯಾದಿಂದ ಬಳಲಿದರು.
- ವೀರೇಶ್ವರ ಪಾಠಕ್‌ರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಯಿತು.

**2) ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು ಸಂಯೋಜಿತ ವಾಕ್ಯ**

- ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತು;ಆದ್ದರಿಂದ ವೀರೇಶ್ವರ ಪಾಠಕ್‌ರವರು ಮಲೇರಿಯಾದಿಂದ ಬಳಲಬೇಕಾಯ್ತು:ಈ ಕಾರಣದಿಂದ ಅವರನ್ನು ಅಲ್ಲಿಂದ ವರ್ಗಾಯಿಸಲಾಯ್ತು.

**3) ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ಅಧೀನಗಳಾಗಿದ್ದರೆ ಅಂತ ವಾಕ್ಯವನ್ನು ಮಿಶ್ರವಾಕ್ಯ ಎನ್ನುತ್ತೇವೆ.**

- ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರಾದರೂ ಅವರ ನಿಧಾರಕ್ಕೆ ಬ್ರಿಟಿಷ್ ಸರಕಾರದ ಅಪ್ಪಣೆ ದೊರೆಯಲಿಲ್ಲವೆಂಬ ವಿಷಯ ತಿಳಿದಾಗ ಅವರು ಬಹುವಾಗಿ ಮರುಗಿದರು.

**ಪ್ರಧಾನ ವಾಕ್ಯ :-**

- ಅವರು ಬಹುವಾಗಿ ಮರುಗಿದರು

**ಉಪವಾಕ್ಯಗಳು :-**

- ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರು.
- ಅವರ ನಿಧಾರಕ್ಕೆ ಬ್ರಿಟಿಷ್ ಸರಕಾರದ ಅಪ್ಪಣೆ ದೊರೆಯಲಿಲ್ಲ.



downloaded from: www.kpscvaani.com

# 13.ಪದಗಳ ಅರ್ಥ

| ಪದ – ಅರ್ಥ | ಪದ – ಅರ್ಥ | ಪದ– ಅರ್ಥ | ಪದ – ಅರ್ಥ |
|---|---|---|---|
| ಕ್ರೌರ್ಯ– ನಿರ್ದಯತೆ | ಊಣೆಯ – ಕೊರತೆ | ತೃಷೆ – ಬಾಯಾರಿಕೆ | ವರ್ಚಸ್ಸು ವಶೀಲಿ–ಪ್ರಭಾವ,ವರ್ಚಸ್ಸು |
| ಹವಣು – ಸಿದ್ಧತೆ | ಬನ್ನ – ಕಷ್ಟ ,ತೊಂದರೆ | ಸುರಬಿ, – ಕಾಮಧೇನು | ವಿಲಾಯಿತಿ – ವಿದೇಶ |
| ಹರಿಕಾರ – ಮುಂದಾಳು | ಹಂಬಲ – ಬಯಕೆ | ಸುಪರ್ದಿ– ವಶ | ಅಸ್ತಿಭಾರ – ಬುನಾಧಿ |
| ಕ್ಷೋಭೆ – ತಳಮಳ | ಇಂಬು – ಅವಕಾಶ | ಕಾಪು – ರಕ್ಷಣೆ | ಕೂರ್ಮೆ – ಸ್ನೇಹ |
| ಕೃತ್ರಿಮ – ಮೋಸ | ತಮಾಲ – ಕತ್ತಲೆ | ಪನ್ನಗ – ಹಾವು | ಪ್ರತ್ಯರ್ಥಿ – ಪ್ರತಿವಾದಿ |
| ಆರ್ತತೆ – ಬಯಕೆ | ಚೋದ್ಯ – ಆಶ್ಚರ್ಯ | ಧೃತಿ – ಧೈರ್ಯ | ಅನೃತ – ಸುಳ್ಳು |
| ಕಸವರ – ಚಿನ್ನ | ಪೊಳಲ್ – ಪಟ್ಟಣ | ಎವೆ – ಕಣ್ಣುರೆಪ್ಪೆ | ಹತಾರ – ಆಯುಧ |
| ಮಸಲತ್ತು – ಪಿತೂರಿ | ಕುಮಕಿ – ಸಹಾಯ | ಕಸರತ್ತು – ಚಮತ್ಕಾರ | ಟಾರಾ – ನಾಶ |
| ಕುಟಿಲ – ಮೋಸ | ದೃಗುಜಲ – ಕಣ್ಣೀರು | ಕಿಂಕರ – ಸೇವಕ | ಗ್ಲಾನಿ –ತಲ್ಲಣ |
| ಗಡಣ – ಸಮೂಹ | ಕೈವಾರ – ಹೊಗಳಿಕೆ | ತನುಜ – ಮಗ | ಸಖ – ಮಿತ್ರ |
| ಎಲರ್ – ಗಾಳಿ | ಅಸು – ಪ್ರಾಣ | ಇದಿರ್ಚಿ– ಹೋರಾಡಿ | ಅಬ್ಧಿ – ಸಮುದ್ರ |
| ವಾಸಿ – ಪ್ರತಿಜ್ಞೆ | ಕದಳಿ –ಬಾಳೆ | ಅಗಡು – ಶೌರ್ಯ | ಉರ್ವಿ – ಭೂಮಿ,ನೆಲ |
| ಅರ್ತಿ– ಪ್ರೀತಿ | ದ್ರುಮ – ಮರ | ತಡಿ – ತಟ | ಉಪಾಸನ – ಪೂಜೆ |
| ಬೆಸಕ್ಕೈ– ಹೇಳು | ಅಳವು – ಪರಾಕ್ರಮ | ಖಳ – ದುಷ್ಟ | ಪಡಿಯರ – ದ್ವಾರಪಾಲಕ |
| ನಾಣಿಲಿ–ನಾಚಿಕೆ ಇಲ್ಲದವ | ಮೃತ್ಪಾತ್ರ – ಮಣ್ಣಿನ ಪಾತ್ರೆ | | |

# 14.ವಿಭಕ್ತಿ ಪ್ರತ್ಯಯಗಳು

| ವಿಭಕ್ತಿ ಹೆಸರು | ಹೊಸಗನ್ನಡ ಪ್ರತ್ಯಯ | ಕಾರಕಾರ್ಥಗಳು | ಉದಾಹರಣೆ | ಹಳಗನ್ನಡ ಪ್ರತ್ಯಯ | ಉದಾಹರಣೆ |
|---|---|---|---|---|---|
| ಪ್ರಥಮ | ಉ | ಕರ್ತೃ | ಸಾವಿತ್ರಿಯು | ಮ್ | ಸಾವಿತ್ರಿಯುಮ್ |
| ದ್ವಿತೀಯ | ಅನ್ನು | ಕರ್ಮ | ಸಾವಿತ್ರಿಯನ್ನು | ಅಂ | ಸಾವಿತ್ರಿಯಂ |
| ತೃತೀಯ | ಇಂದ , ಯಿಂದ | ಕರಣ | ಸಾವಿತ್ರಿಯಿಂದ | ಇಂ,ಇಂದಂ,ಇಂದೆ | ಸಾವಿತ್ರಿಯಿಂ |
| ಚತುರ್ಥಿ | ಗೆ ,ಇಗೆ ,ಕ್ಕೆ | ಸಂಪ್ರದಾನ | ಸಾವಿತ್ರಿಗೆ | ಗೆ ,ಕೆ,ಕ್ಕೆ | ಸಾವಿತ್ರಿಂಗೆ |
| ಪಂಚಮಿ | ದೆಸೆಯಿಂದ | ಅಪದಾನ | ಸಾವಿತ್ರಿದೆಸೆಯಿಂದ | ಅತ್ತಣಿಂ ,ಅತ್ತಣಿಂದಂ | ಸಾವಿತ್ರಿಯತ್ತಣಿಂ |
| ಷಷ್ಠಿ | ಅ | ಸಂಬಂಧ | ಸಾವಿತ್ರಿಯ | ಅ | ಸಾವಿತ್ರಿಯ |
| ಸಪ್ತಮಿ | ಅಲ್ಲಿ | ಅಧಿಕರಣ | ಸಾವಿತ್ರಿಯಲ್ಲಿ | ಒಳ್ | ಸಾವಿತ್ರಿಯೊಳ್ |



downloaded from: www.kpscvaani.com

| ಪದ | ವಿಭಕ್ತಿ ಪ್ರತ್ಯಯ | ವಿಭಕ್ತಿ ಹೆಸರು |
|---|---|---|
| ಪ್ರೀತಿಯ | ಅ | ಷಷ್ಠಿ |
| ಬಿರುಗಾಳಿಗೆ | ಇಗೆ | ಚತುರ್ಥಿ |
| ಜಲಕ್ಕೆ | ಕ್ಕೆ | ಚತುರ್ಥಿ |
| ಬಿದ್ದುದ್ದನ್ನು | ಅನ್ನು | ದ್ವಿತೀಯಾ |
| ಭರವಸೆಗಳ | ಅ | ಷಷ್ಠಿ |
| ಸಾವಿತ್ರಿಯು | ಉ | ಪ್ರಥಮ |
| ಸಾವಿತ್ರಿಯಂ | ಅಂ | ದ್ವಿತೀಯಾ |
| ಸಂಶಯದೊಳ್ | ಒಳ್ | ಸಪ್ತಮಿ |
| ಜಲದಿಂ | ಇಂ | ತೃತೀಯ |
| ಮರದತ್ತಣಿಂ | ಅತ್ತಣಿಂ | ಪಂಚಮಿ |
| ರಾಯಂಗೆ | ಗೆ | ಚತುರ್ಥಿ |

## ಮಾದರಿ ಪ್ರಶ್ನೆಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1) ಪರ್ಶಿಯನ್ ಭಾಷೆಯ ಪದ :

(ಎ) ಕಾಗದ (ಬಿ) ಅಮಾನತು (ಸಿ) ಅನಾನಸು (ಡಿ) ದಿವಾನ

2) ಅಜಮಾಯಿಸಿ ಇದು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿದೆ ?

(ಎ) ಪೋರ್ಚ್‌ಗೀಸ್ (ಬಿ) ಪರ್ಶಿಯನ್ (ಸಿ) ಅರಬ್ಬಿ (ಡಿ) ಗ್ರೀಕ್

3) ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅದು :

(ಎ) ಸಾಮಾನ್ಯವಾಕ್ಯ (ಬಿ) ಸಂಯೋಜಿತ ವಾಕ್ಯ (ಸಿ) ಮಿಶ್ರವಾಕ್ಯ (ಡಿ) ನಿಗಧಿತ ವಾಕ್ಯ

4) ಕಳುವ್ಯಾರೆ ಪದದ ಗ್ರಾಂಥಿಕ ರೂಪ :

(ಎ) ಕಳವುಮಾಡಿದರು (ಬಿ) ಕಳುಹಿಸಿದ್ದಾರೆ (ಸಿ) ಕಳೆದುಹೋಗಿದೆ (ಡಿ) ಕಳೆದಿದ್ದಾರೆ

5) ತೃತೀಯಾ ವಿಭಕ್ತಿ ಕಾರಕಾರ್ಥ :

(ಎ) ಕರ್ತೃ (ಬಿ) ಸಂಪ್ರಧಾನ (ಸಿ) ಕರ್ಮ (ಡಿ) ಕರಣ

6) ರಾತ್ರಿಯೊಳ್ –ಪದದ ವಿಭಕ್ತಿ ಹೆಸರು :

(ಎ) ಪಂಚಮಿ (ಬಿ) ಸಪ್ತಮಿ (ಸಿ) ಚತುರ್ಥಿ (ಡಿ) ದ್ವಿತೀಯ



downloaded from: www.kpscvaani.com

7) ವೀರೇಶ್ವರ ಪಾಠಕ್ ರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಯಿತು– ಇದು

(ಎ) ಸಾಮಾನ್ಯವಾಕ್ಯ (ಬಿ) ಸಂಯೋಜಿತ ವಾಕ್ಯ (ಸಿ) ಮಿಶ್ರವಾಕ್ಯ (ಡಿ) ಸಂಬಂಧಿತ ವಾಕ್ಯ

8) ಅರ್ತಿ –ಪದದ ಅರ್ಥ :

(ಎ) ಅದಿವಿ (ಬಿ) ಪ್ರೀತಿ (ಸಿ) ಐತಿ (ಡಿ) ಆರತಿ

9) ಲೋಕದೊಳ್ ಎಂಬುದು ಈ ವಿಭಕ್ತಿಯಲ್ಲಿದೆ.

(ಎ) ಪ್ರಥಮಾ (ಬಿ) ತೃತೀಯಾ (ಸಿ) ಪಂಚಮಿ (ಡಿ) ಸಪ್ತಮಿ

10) ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು

(ಎ) ಸಾಮಾನ್ಯವಾಕ್ಯ (ಬಿ) ನಿರ್ಬಂಧಿತ ವಾಕ್ಯ (ಸಿ) ಮಿಶ್ರವಾಕ್ಯ (ಡಿ) ಸಂಯೋಜಿತ ವಾಕ್ಯ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

11) ದಾಖಲೆ : ಉರ್ದು :: ಅನಾನಸು : ________________

12) ಇಲ್ಲದ್ದಂಗ : ಇಲ್ಲದಹಾಗೆ : : ಇಸವಾಸ : _________________

13) ಉಪಾಸನೆ : ಪೂಜೆ : : ವಾಜಿ : ____________

14) ವಿಲಾತಿ : ವಿಲಾಯಿತಿ : : ಆರ್ತತೆ : ______________

15) ಮನೆಯನ್ನು : ದ್ವಿತೀಯ : : ಮರದಲ್ಲಿ : __________

16) ಒಳ್ : ಸಪ್ತಮಿ : : ಅತ್ತಣಿಂ : ______________

17) ಪ್ರಥಮ : ಕರ್ತೃಕಾರಕ : : ಷಷ್ಠಿ : ______________

18) ಅನೃತ : ಸುಳ್ಳು : : ಕೃತ್ರಿಮ : _____________

19) ಪೊಳಲ್ :ಪಟ್ಟಣ : : ಕಸವರ : ____________

20) ತನುಜ : ಮಗ : : ಸಖ : ______________

**********************************************************************************

**ಉತ್ತರಗಳು : 1) (ಡಿ) ದಿವಾನ 2)(ಬಿ) ಪರ್ಶಿಯನ್ 3) (ಸಿ) ಮಿಶ್ರವಾಕ್ಯ 4) (ಬಿ) ಕಳುಹಿಸಿದ್ದಾರೆ**

**5) (ಡಿ) ಕರಣ 6) (ಬಿ) ಸಪ್ತಮಿ 7) (ಎ) ಸಾಮನ್ಯವಾಕ್ಯ 8) (ಬಿ) ಪ್ರೀತಿ**

**9) (ಡಿ) ಸಪ್ತಮಿ 10) (ಡಿ) ಸಂಯೋಜಿತ ವಾಕ್ಯ 11) ಪೋರ್ಚ್‌ಗೀಸ್ 12) ವಿಶ್ವಾಸ**

**13) ಕುದುರೆ, ಹಯ, 14) ಬಯಕೆ 15) ಸಪ್ತಮಿ 16) ಪಂಚಮಿ 17) ಸಂಬಂಧಕಾರಕ**

**18) ಮೋಸ 19) ಚಿನ್ನ /ಬಂಗಾರ 20) ಮಿತ್ರ /ಗೆಳೆಯ /ಸ್ನೇಹಿತ**



downloaded from: www.kpscvaani.com

# 15.ಲೇಖನ ಚಿಹ್ನೆಗಳು

**ಪೂರ್ಣ ವಿರಾಮ :– ( . )** ಒಂದು ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಈ ಪೂರ್ಣವಿರಾಮ ಚಿಹ್ನೆಯನ್ನು ಬಳಸಲಾಗುತ್ತದೆ.

**ಉದಾ :–** ವಿದ್ಯಾರ್ಥಿಗಳು ಪದ್ಯವನ್ನು ಹಾಡುತ್ತಾರೆ.

**ಅರ್ಧವಿರಾಮ ಚಿಹ್ನೆ** :– ( ; ) ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು.

ಉದಾಹರಣೆಗೆ :– ತಾವು ಕಡಿಮೆ ಮಾತನಾಡಿದ್ದೀರಿ ;ಹೆಚ್ಚು ಕೆಲಸ ಮಾಡಿದ್ದೀರಿ.

**ಅಲ್ಪವಿರಾಮ :– ( , )** ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇಷಣ ಬಿಟ್ಟು ಉಳಿದವುಗಳ ಮುಂದೆ ಅಲ್ಪವಿರಾಮ ಬಳಸಬೇಕು.

**ಉದಾ :–** ಬಟ್ಟೆಗಿರಣಿ, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ತಯಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದೆ.

**ಪ್ರಶ್ನಾರ್ಥಕ :– (?)** ಪ್ರಶ್ನಾರೂಪದ ಪದ ಮತ್ತು ವಾಕ್ಯಗಳ ಮುಂದೆ ಪ್ರಶ್ನಾರ್ಥಕ ಚಿಹ್ನೆಯನ್ನು ಬಳಸಲಾಗುತ್ತದೆ.

**ಉದಾಹರಣೆಗೆ :–** ದಾಶರಥಿ ಯಾರು ?

**ಭಾವಸೂಚಕ ಚಿಹ್ನೆ :–** ( ! ) ಹರ್ಷ,ಆಶ್ಚರ್ಯ,ಸಂತೋಷ,ವಿಷಾದ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವಾಗ ಪದಗಳ ಮುಂದೆ ಈ ಚಿಹ್ನೆಯನ್ನು ಬಳಸಲಾಗುವುದು.

ಉದಾಹರಣೆಗೆ :– ಅಯ್ಯೋ ! ಹೀಗಾಗ ಬಾರದಿತ್ತು !

ಅಬ್ಬಾ ! ಎಷ್ಟೊಂದು ಸುಂದರ !

**ಉದ್ಧರಣ ಚಿಹ್ನೆ :–** ( “ ” ) ಒಬ್ಬರು ಹೇಳಿದ ಮಾತನ್ನು ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು.

ಉದಾಹರಣೆಗೆ :– (ವಿಶ್ವೇಶ್ವರಯ್ಯನವರು ಹೇಳಿದ ಮಾತನ್ನು ಬರೆಯುವಾಗ )

“ ಶಿಕ್ಷಣವು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಅಜನ್ಮಸಿದ್ಧ ಹಕ್ಕಾಗಬೇಕು” ಎಂದು ಸರ್ .ಎಂ .ವಿಶ್ವೇಶ್ವರಯ್ಯನವರು ಹೇಳಿದರು.

**ವಾಕ್ಯ ವೇಷ್ಟನ ಚಿಹ್ನೆ :–** ( ‘ ’ ) ಪಾರಿಭಾಷಿಕ ಪದಗಳನ್ನು ಬಳಸುವಾಗ ,ಅನ್ಯ ಭಾಷೆಯ ಪದಗಳನ್ನು ಬಳಸುವಾಗ ಪ್ರಮುಖ ಪದಗಳನ್ನು ಸೂಚಿಸುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ.

ಉದಾಹರಣೆಗೆ :– ಕನ್ನಡ ಭಾಷೆಯಲ್ಲಿ ‘ ಇಂಗ್ಲಿಷ್ ’, ‘ಪರ್ಶಿಯನ್’, ‘ಪೋರ್ಚ್‌ಗೀಸ್’ ಭಾಷೆಯ ಪದಗಳನ್ನು ಬಳಸಲಾಗುತ್ತದೆ.

**ಆವರಣ ಚಿಹ್ನೆ :– ( )** ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ.



downloaded from: www.kpscvaani.com

**ಉದಾಹರಣೆಗೆ :–1)** ಅರಸುಗಳ(ರಾಜರ)ವಾಜಿ(ಕುದುರೆ) ಆಶ್ರಮವನ್ನು ಹೊಕ್ಕಿತು.
2) ನೀರನ್ನು ವಿಭಜಿಸಿದರೆ ಆಮ್ಲಜನಕ(ಆಕ್ಸಿಜನ್) ಜಲಜನಕ (ಹೈಡ್ರೋಜನ್)ಗಳು ಉತ್ಪತ್ತಿಯಾಗುತ್ತವೆ.

**ವಿವರಣಾತ್ಮಕ ಚಿಹ್ನೆ :–** ( :– ) ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.

**ಉದಾಹರಣೆಗೆ :– ಪಂಚಮಹಾವಾದ್ಯಗಳು :** ತಾಳ,ಹಳಗ,ಗಂಟೆ ,ಮೌರಿ, ಸನಾದಿ.

**ಸಮ್ಯಕ್ ದರ್ಶನ** :– ಜೈನಮತದ ಬಗ್ಗೆ ಇರುವ ವಿಶ್ವಾಸ.

## 16.ಅವ್ಯಯಗಳು

**ನಾಮಪದ, ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೆ ಏಕರೂಪವಾಗಿರುವ ಪದಗಳನ್ನು ಅವ್ಯಯಗಳು ಎಂದು ಕರೆಯಲಾಗಿದೆ.**

| ಸಾಮಾನ್ಯಾರ್ಥಕಾವ್ಯಯ | ಭಾವಸೂಚಕಾವ್ಯಯಗಳು | ಕ್ರಿಯಾರ್ಥಕಾವ್ಯಯಗಳು | ಸಂಬಂಧಾರ್ಥಕಾವ್ಯಯಗಳು | ಅವಧಾರಣಾರ್ಥಕಾವ್ಯಯ |
|---|---|---|---|---|
| ಯಾವುದಾದರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವಂತಹ ಅವ್ಯಯಗಳು | ಮನಸ್ಸಿನಲ್ಲಿ ಉಂಟಾಗುವ ಭಾವಗಳನ್ನು ವ್ಯಕ್ತಪಡಿಸುವಾಗ ಬಳಸುವ ಪದಗಳು (ಕೋಪ,ಭಯ) | ಕ್ರಿಯಾಪದದ ಸ್ಥಾನದಲ್ಲಿದ್ದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯಗಳು | ಎರಡು ಪದ, ಪದಸಮುಚ್ಚಯ, ವಾಕ್ಯಗಳನ್ನು ಜೋಡಿಸುವಂತಹ ಪದಗಳು | ಒಂದು ನಿಶ್ಚಯಾರ್ಥದಲ್ಲಿರುವ ಅವ್ಯಯವನ್ನು('ಏ') ಅವಧಾರಣಾರ್ಥಕ ಅವ್ಯಯ ಎಂದು ಕರೆಯುತ್ತಾರೆ. |
| ಬೇಗನೆ, ಮೆಲ್ಲಗೆ, ಸೊಗಸಾಗಿ, ಚೆನ್ನಾಗಿ ಸುಮ್ಮನೆ, ತಟ್ಟನೆ, ತರುವಾಯ, ಹಾಗೆ, ಅಂತು, ಬೇರೆ, ಬಳಿಕ, ಕೂಡಲೆ. | ಆಹಾ! ಭಳಿರೆ! ಅಯ್ಯೋ! ಓಹೋ! ಹೋ! ಅಃ! ಆಃ ಓ | ಅಹುದು ಸಾಕು ಅಲ್ಲ ಹೌದು ಬೇಡ ಉಂಟು | ಮತ್ತು ಅಥವಾ ಆದ್ದರಿಂದ ಊ ಉಂ ಅಲ್ಲದೆ | ಅವನೇ ಅದುವೇ ನೀನೇ ಅವಳೇ ಅವರೇ |



downloaded from: www.kpscvaani.com

# 17.ನಾಮಪದಗಳು

ನಾಮ ಪ್ರಕೃತಿಗಳಿಗೆ ನಾಮ ವಿಭಕ್ತಿಗಳು ಸೇರಿ ಆಗುವ ಪದವೇ ನಾಮಪದ.

| ವಸ್ತುವಾಚಕಗಳ ವಿಧಗಳು | | | ಸರ್ವ ನಾಮಗಳು | ಸರ್ವ ನಾಮಗಳ ವಿಧಗಳು | | |
|---|---|---|---|---|---|---|
| ರೂಢ ನಾಮಗಳು | ಅಂಕಿತ ನಾಮಗಳು | ಅನ್ವರ್ಥ ನಾಮಗಳು | | ಪುರುಷವಾಚಕ ಸರ್ವನಾಮ | ಆತ್ಮಾರ್ಥಕ ಸರ್ವನಾಮಗಳು | ಪ್ರಶ್ನಾರ್ಥಕ ಸರ್ವನಾಮ |
| ರೂಢಿ ಯಿಂದ ಬಂದ ಪದಗಳು | ನಿರ್ದಿಷ್ಟವಾಗಿ ಗುರುತಿಸಲು ಇಟ್ಟ ಹೆಸರುಗಳು | ಅರ್ಥಕ್ಕನು ಗುಣವಾಗಿ ಇಟ್ಟ ಹೆಸರುಗಳು | ನಾಮಪದದ ಬದಲಿಗೆ ಬಳಸುವ ವಾಚಕಗಳು | ಪುರುಷ ರೂಪದ ಸರ್ವ ನಾಮಗಳು | ತಾನು,ತಾವು –ಈ ರೂಪದ ಸರ್ವ ನಾಮಗಳು | ಪ್ರಶ್ನಾರ್ಥಕ ರೂಪದ ಸರ್ವ ನಾಮಗಳು |
| ನದಿ | ಸಹದೇವ | ವ್ಯಾಪಾರಿ | ಅವನು,ಇವನು | (ಉ.ಪು) ನಾನು, ನಾವು | ತಾನು | ಯಾರು ? |
| ಪರ್ವತ | ಧರ್ಮರಾಯ | ವಿದ್ವಾಂಸ | ಅವಳು,ಇವಳು | (ಮ.ಪು) ನೀನು, ನೀವು | ತಾವು | ಏನು ? |
| ಊರು | ರಾಹುಲ | ವಿಜ್ಞಾನಿ | ಅದು , ಇದು | (ಪ್ರ.ಪು) ಅವನು,ಅವರು, ಅದು, ಇವನು, ಇವು, ಅವಳು, ಇವಳು | ತನ್ನ | ಯಾವುದು ? |
| ದೇಶ | ಕಮಲಾಕ್ಷ | ಪೂಜಾರಿ | ಅವರು,ಇವರು | | ತಮ್ಮ | ಯಾರಿಗೆ ? |
| ಮನುಷ್ಯ | ರಾಮ | ಕುರುಡ | ಅವರು,ಇವರು | | ತಮಗೆ | ಯಾವು ? |
| ವಿದ್ಯಾರ್ಥಿ | ಶಬರಿ | ಎಳವ | ಅವು , ಇವು | | ತಮ್ಮಲ್ಲಿ | ಎಲ್ಲಿ ? |
| ಶಾಲೆ | ದ್ರೋಣ | ಶಿಕ್ಷಕ | | | ತಮಗಾಗಿ | ಯಾಕೆ ? |

| ಗುಣವಾಚಕ | ಭಾವನಾಮ | ಸಂಖ್ಯಾವಾಚಕ | ಸಂಖ್ಯೇಯವಾಚಕ | ದಿಗ್ವಾಚಕ | ಪರಿಮಾಣವಾಚಕ |
|---|---|---|---|---|---|
| ವಸ್ತುವ್ಯಕ್ತಿಯ ಗುಣ,ರೀತಿ, ಸ್ವಭಾವಗಳನ್ನು ತಿಳಿಸುವ ವಾಚಕಗಳು | ವಸ್ತು ಮತ್ತು ಕ್ರಿಯೆಯ ಭಾವಗಳನ್ನು ತಿಳಿಸುವ ಪದಗಳು | ಸಂಖ್ಯೆಯನ್ನು ಹೇಳುವ ಶಬ್ದಗಳೆಲ್ಲ ಸಂಖ್ಯಾವಾಚಕಗಳು | ಸಂಖ್ಯೆಯಿಂದ ಕೂಡಿದ ವಸ್ತುಗಳನ್ನು ಹೇಳುವ ಶಬ್ದಗಳು | ದಿಕ್ಕುಗಳನ್ನು ಸೂಚಿಸುವ ಪದಗಳು | ವಸ್ತುಗಳ ಸಾಮಾನ್ಯ ಅಳತೆ, ಪರಿಮಾಣ, ಗಾತ್ರ–ಇತ್ಯಾದಿಗಳನ್ನು ಹೇಳುವ ಶಬ್ದಗಳು ಪರಿಮಾಣವಾಚಕಗಳು |
| ಒಳ್ಳೆಯ | ಕೆಂಪು | ಒಂದು | ಹನ್ನೆರಡನೆಯ | ಪೂರ್ವ | ಅಷ್ಟು |
| ಕೆಟ್ಟ | ಹಿರಿಮೆ | ಎರಡು | ಆರನೆಯ | ಪಶ್ಚಿಮ | ಎಷ್ಟು |
| ದೊಡ್ಡದು | ನೋಟ | ಹನ್ನೆರಡು | ಎಂಬತ್ತನೆಯ | ಉತ್ತರ | ಹಲವು |
| ಹಳತು | ಮಾಟ | ಐವತ್ತು | ಮೂವರು | ದಕ್ಷಿಣ | ಅನಿತು |
| ಸಣ್ಣ | ಆಟ | ಎಂಬತ್ತು | ಐವರು | ಈಶಾನ್ಯ | ಇನಿತು |
| ಚಿಕ್ಕ | ಬಿಳುಪು | ತೊಂಬತ್ತು | ಇಬ್ಬರು | ವಾಯುವ್ಯ | |



downloaded from: www.kpscvaani.com

# 18.ಕ್ರಿಯಾಪದ

ಕ್ರಿಯಾಪದದ ಮೂಲ ರೂಪವನ್ನು **'ಧಾತು'** ಎಂದು ಕರೆಯಲಾಗಿದೆ.

| ಕ್ರಿಯಾಪದ | ಧಾತು | ಕ್ರಿಯಾಪದ | ಧಾತು |
|---|---|---|---|
| ನಿಲ್ಲಿಸು | ನಿಲ್ಲು | ಹಚ್ಚುವುದು | ಹಚ್ಚು |
| ನಡೆಸು | ನಡೆ | ಮುಟ್ಟೋಣ | ಮುಟ್ಟು |
| ಕಟ್ಟುವುದು | ಕಟ್ಟು | ಆಗೋಣ | ಆಗು |

ಧಾತುಗಳಲ್ಲಿ **'ಸಕರ್ಮಕ ಧಾತು '** ಮತ್ತು **'ಅಕರ್ಮಕ ಧಾತು'** ಗಳೆಂದು ಎರಡು ವಿಧಗಳಿವೆ.

| ಸಕರ್ಮಕ ಧಾತು | ಅಕರ್ಮಕ ಧಾತು |
|---|---|
| ಕರ್ಮಪದ ಬಯಸುವ ಧಾತು | ಕರ್ಮಪದವನ್ನು ಹೊಂದಿರದ ಧಾತು |
| ಕೊಡು, ಬಿಡು, ಉಣ್ಣು, ಉಜ್ಜು, ತಿದ್ದು, ಮುಚ್ಚು | ಮಲಗು, ಓಡು, ಬದುಕು, ಹೋಗು, ನಾಚು |

| ಕರ್ತರಿಪ್ರಯೋಗ | ಕರ್ಮಣಿಪ್ರಯೋಗ |
|---|---|
| ಧಾತುಗಳಿಗೆ ಲಿಂಗವಾಚಕ ಮತ್ತು ವಚನವಾಚಕಗಳು ಸೇರಿ ಒಂದು ಪೂರ್ಣವಾಕ್ಯವಾದಾಗ ಅದು **'ಕರ್ತರಿ ಪ್ರಯೋಗದ'** ವಾಕ್ಯವೆನಿಸುತ್ತದೆ. | ಸಕರ್ಮಕ ಧಾತುಗಳ ಮೇಲೆ **'ಅಲ್ಪಡು'** ಪ್ರತ್ಯಯ ಸೇರಿ ಕಾಲಸೂಚಕ ಮತ್ತು ಆಖ್ಯಾತ ಪ್ರತ್ಯಯಗಳು ಸೇರಿದಾಗ **'ಕರ್ಮಣಿ ಪ್ರಯೋಗದ'** ವಾಕ್ಯವಾಗುತ್ತದೆ. |
| **ಉದಾಹರಣೆ :** ಭೀಮನು ಅನ್ನವನ್ನು ಉಂಡನು | **ಉದಾಹರಣೆ :** ಭೀಮನಿಂದ ಅನ್ನವು ಉಣ್ಣಲ್ಪಟ್ಟಿತು. |

## ಅರ್ಥರೂಪ ಕ್ರಿಯಾಪದಗಳ ವಿಧಗಳು

| ವಿಧ್ಯರ್ಥಕ | ನಿಷೇಧಾರ್ಥಕ | ಸಂಭಾವನಾರ್ಥಕ |
|---|---|---|
| ಆಶೀರ್ವಾದ , ಆಜ್ಞೆ ,ಆರೈಕೆ ,ಅಪ್ಪಣೆ ಸೂಚಿಸುತ್ತವೆ. | ಕ್ರಿಯೆ ನಡೆಯಲಿಲ್ಲ ಅಥವಾ ನಡೆಯುವುದಿಲ್ಲ ಎಂದು ಸೂಚಿಸುತ್ತವೆ. | ಕ್ರಿಯೆ ನಡೆಯುವಲ್ಲಿ ಸಂಶಯ,ಊಯೆ ಸೂಚಿಸುತ್ತವೆ. |
| ಮಾಡಲಿ | ಮಾಡನು / ಮಾಡರು | ಮಾಡಿಯಾನು / ಮಾಡಿಯಾರು |
| ತಿನ್ನಲಿ / ತಿನ್ನಿರಿ | ತಿನ್ನಳು / ತಿನ್ನರು/ತಿನ್ನದು | ತಿಂದಾಳು / ತಿಂದಾರು/ತಿಂದೀತು |
| ಓದಲಿ / ಓದಿರಿ | ಓದನು / ಓದರು/ಓದದು | ಓದಿಯಾಣು / ಓದಿಯಾರು/ಓದೀತು |
| ನೋಡಲಿ/ನೋಡಿರಿ | ನೋಡನು / ನೋಡರು | ನೋಡಿಯಾನು / ನೋಡಿಯಾರು |
| ಮಾಡಲಿ/ಮಾಡಿರಿ | ಮಾಡಳು / ಮಾಡರು | ಮಾಡಿಯಾಳು / ಮಾಡಿಯಾರು |
| ಮಾಡು / ಮಾಡಿ / ಮಾಡಿರಿ | ಮಾಡೆ / ಮಾಡದು | ಮಾಡಿಯೇ / ಮಾಡೀರಿ/ಮಾಡೀತು |
| ಮಾಡುವೆ/ಮಾಡೋಣ/ಮಾಡುವಾ | ಮಾಡೆನು / ಮಾಡೆವು | ಮಾಡೇನು / ಮಾಡೇವು |
| ಹಾಡು /ಹಾಡುವೆ | ಹಾಡನು/ಹಾಡಳು /ಹಾಡರು/ಹಾಡೆನು | ಹಾಡಿಯೇನು/ಹಾಡಿಯೇರು/ಹಾಡಿಯೇವು |
| ನೋಡು | ನೋಡನು / ನೋಡಳು / ನೋಡರು | ನೋಡಿಯೇನು / ನೋಡಿಯೇರು |
| ಕಟ್ಟು / ಕಟ್ಟುವೆ | ಕಟ್ಟನು /ಕಟ್ಟಳು /ಕಟ್ಟರು /ಕಟ್ಟೆನು | ಕಟ್ಟಿಯೇನು/ಕಟ್ಟಿಯಾರು |
| ಕೇಳು/ಕೇಳುವೆ/ಕೇಳಿರಿ | ಕೇಳನು/ಕೇಳೆನು/ಕೇಳರು | ಕೇಳಿಯಾನು/ಕೇಳಿಯೇನು/ಕೇಳಿಯಾರು |



downloaded from: www.kpscvaani.com

| | | |
|---|---|---|
| ಓದು/ಓದಲಿ | ಓದನು/ಓದಳು/ಓದರು | ಓದಿಯಾನು?ಓದಿಯಾರು |
| ಓಡು/ಓಡಲಿ/ಓಡುವೆ | ಓಡನು/ಓಡಳು/ಓಡರು/ಓಡೆನು | ಓಡಿಯಾನು/ಓಡಿಯಾರು/ಓಡಿಯೇನು |
| ಬರೆ/ಬರೆಯಲಿ/ಬರೆಯಿರಿ | ಬರೆಯನು/ಬರೆಯಳು/ಬರೆಯರು/ ಬರೆಯದು | ಬರೆದಾನು/ಬರೆದಾಳು/ಬರೆದಾರು/ ಬರೆದೀತು |

## 19.ಕಾಲಗಳು

| ಪುರುಷಗಳು | ಭೂತಕಾಲ (ದ ,ದಪ) | ವರ್ತಮಾನ ಕಾಲ (ಉತ್ತ) | ಭವಿಷ್ಯತ್ ಕಾಲ (ವ) |
|---|---|---|---|
| | ಹಿಂದೆ ನಡೆದಿದ್ದು | ಈಗ ನಡೆಯುತ್ತಿರುವುದು | ಮುಂದೆ ನಡೆಯುವುದು |
| ಉತ್ತಮ ಪುರುಷ(ನಾನು) | ತಿಂದೆನು | ತಿನ್ನುತ್ತೇನೆ | ತಿನ್ನುವೆನು |
| ಮಧ್ಯಮ ಪುರುಷ(ನೀನು) | ತಿಂದೆ | ತಿನ್ನುತ್ತಿ | ತಿನ್ನುವೆ |
| ಪ್ರಥಮ ಪುರುಷ(ಅವನು) | ತಿಂದನು | ತಿನ್ನುತ್ತಾನೆ | ತಿನ್ನುವನು |

## 20.ಹೊಸಗನ್ನಡ ರೂಪಗಳು

| ಹಳಗನ್ನಡ – ಹೊಸಗನ್ನಡ | ಹಳಗನ್ನಡ – ಹೊಸಗನ್ನಡ |
|---|---|
| ನೆಗಳ್ವೇಲೇಳ್ಕುಂ – ನಡೆದುಕೊಳ್ಳಬೇಕು | ಅದರ್ಕೆ – ಅದಕ್ಕೆ |
| ಮಾಳ್ಪೆಂ — ಮಾಡುವೆನು | ಇರ್ಪುದು —ಇರುವುದು |
| ಪಸುರ್ಗೆ – ಹಸುರಿಗೆ | ನಿಂತಿರ್ದನು –ನಿಂತಿದ್ದನು |
| ಒತ್ತಂಬದಿಂದ — ಒತ್ತಾಯದಿಂದ | ನೋಳಪಿಂಗೆ – ನೋಣಕ್ಕೆ |
| ಅನ್ನೆಗಮ್ — ಅಷ್ಟರಲ್ಲಿ / ಅಲ್ಲಿಯವರೆಗೆ | ಆದೆನ್ —ಆಗುವೆನು |
| ಕಾವಲ್ಗೆ —ಕಾವಲಿಗೆ | ಓದಿಕೊಳುತಿರ್ದನು — ಓದಿಕೊಳ್ಳುತ್ತಿದ್ದನು |
| ಬಿಡಿಸದಿರ್ದೊಡೆ –ಬಿಡಿಸದಿದ್ದರೆ | ಕೈಯೊಳ್ — ಕೈಯಲ್ಲಿ |
| ಅಪ್ಪುದರಿಂ – ಆದುದರಿಂದ | ಅಂತಪ್ಪನನ್ — ಅಂತಹವನನ್ನು |
| ಎಂಬವೊಲ್ —ಎನ್ನುವಂತೆ | ಹೋಹುದೆ –ಹೋಗುವುದೆ |
| ಇರ್ವರ್ಗ್ಗಂ–ಇಬ್ಬರಿಗೂ | ಕೂಡಿದೊನ್ — ಕೂಡಿದವನಾಗಿ |
| ಪೋಗಲ್ವೇಳ್ದನ್ – ಹೋಗಲೇಳಿದನು | ಇರ್ದೊಡೆ — ಇದ್ದಾಗ /ಇದ್ದರೆ |
| ನೋಳ್ಪೆನ್ –ನೋಡುವೆನು | ಬರ್ಪುದಕಂ – ಬರುವುದಕ್ಕೂ |
| ಸೈರಿಸದೆ –ಸಹಿಸಲಾರದೆ | ಉಗುಳ್ಗುಮ್ —ಉಗುಳುತ್ತಿದ್ದನು |
| ಇರ್ಪವರಲ್ಲಮ್ — ಇರುವವರಲ್ಲ | ಒಡಂಬಟ್ಟು — ಒಪ್ಪಿಕೊಂಡು |
| ನೋಳ್ಪನ್ನೆಗಂ – ನೋಡುವಷ್ಟರಲ್ಲಿ | |



downloaded from: www.kpscvaani.com

## ಮಾದರಿ ಪ್ರಶ್ನೆಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1) ಒಬ್ಬರು ಹೇಳಿದ ಮಾತನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಚಿಹ್ನೆ:

(ಎ) ಅಲ್ಪವಿರಾಮ (ಬಿ) ವಾಕ್ಯವೇಷ್ಟನ (ಸಿ) ಉದ್ಧರಣ (ಡಿ) ಪ್ರಶ್ನಾರ್ಥಕ

2) ಅಯ್ಯೋ ! ಹೀಗಾಗ ಬಾರದಿತ್ತು ! ಈ ವಾಕ್ಯದಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ :

(ಎ) ಭಾವಸೂಚಕ (ಬಿ) ಪೂರ್ಣವಿರಾಮ (ಸಿ) ಆವರಣ (ಡಿ) ಉದ್ಧರಣ

3) ಕ್ರಿಯಾರ್ಥಕಾವ್ಯಯವನ್ನು ಸೂಚಿಸುವ ಪದ :

(ಎ) ಚೆನ್ನಾಗಿ (ಬಿ) ಸಾಕು (ಸಿ) ಮತ್ತು (ಡಿ) ಅಯ್ಯೋ

4) ಆತ್ಮಾರ್ಥಕ ಸರ್ವನಾಮ ಪದ :

(ಎ) ತಾವು (ಬಿ) ಅವರು (ಸಿ) ಆದ್ದರಿಂದ (ಡಿ) ಯಾರು ?

5) ಅನ್ವರ್ಥನಾಮ ಪದಕ್ಕೆ ಉದಾಹರಣೆ :

(ಎ) ಮನುಷ್ಯ (ಬಿ) ವ್ಯಾಪಾರಿ (ಸಿ) ಸಹದೇವ (ಡಿ) ತಮಗೆ

6) ಕ್ರಿಯಾಪದದ ಮೂಲ ರೂಪ:

(ಎ) ಕೃದಂತ (ಬಿ) ವಿಭಕ್ತಿ (ಸಿ) ನಾಮಪ್ರಕೃತಿ (ಡಿ) **ಧಾತು**

7) ನಿಷೇಧಾರ್ಥಕ ರೂಪದ ಕ್ರಿಯಾಪದ :

(ಎ) ಓದರು (ಬಿ) ಓದಲಿ (ಸಿ) ಓದಿಯಾರು (ಡಿ) ಓದುವನು

8) ಕೆಳಗಿನವುಗಳಲ್ಲಿ ಸಕರ್ಮಕ ಧಾತು :

(ಎ) ಮಲಗು (ಬಿ) ಬದುಕು (ಸಿ) ಓಡು (ಡಿ) ಕೊಡು

9) ಹಾಡು ಧಾತುವಿನ ನಿಷೇಧಾರ್ಥಕ ರೂಪ :

(ಎ) ಹಾಡನು (ಬಿ) ಹಾಡಲಿ (ಸಿ) ಹಾಡಿಯಾರು (ಡಿ) ಹಾಡಿರಿ

10) ಕಟ್ಟಿಯಾರು ಪದದ ವಿಧ್ಯರ್ಥಕ ಬಹುವಚನ ರೂಪ :

(ಎ) ಕಟ್ಟು (ಬಿ) ಕಟ್ಟಿರಿ (ಸಿ) ಕಟ್ಟರು (ಡಿ) ಕಟ್ಟಿಯಾನು

11) ಮುಟ್ಟೋಣ – ಪದದ ಧಾತು :

(ಎ) ಮುಡಿ (ಬಿ) ಮುಟ್ಟರು (ಸಿ) ಮುಟ್ಟಲಿ (ಡಿ) ಮುಟ್ಟು

12) ಬರೆ – ಪದದ ನಿಷೇಧಾರ್ಥಕ ನಪುಂಸಕಲಿಂಗ ರೂಪ :

(ಎ) ಬರೆಯರು (ಬಿ) ಬರೆದೇನು (ಸಿ) ಬರೆಯದು (ಡಿ) ಬರೆದೀತು

13) ಹರ್ಷ,ಆಶ್ಚರ್ಯ,ಸಂತೋಷ, ವಿಷಾದ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವಾಗ ಪದಗಳ ಮುಂದೆ ಈ ಚಿಹ್ನೆಯನ್ನು ಬಳಸಲಾಗುವುದು.

(ಎ) ಭಾವಸೂಚಕ (ಬಿ) ಪೂರ್ಣವಿರಾಮ (ಸಿ) ಅಲ್ಪವಿರಾಮ (ಡಿ) ಉದ್ಧರಣ

14) ಸಾಮಾನ್ಯಾವ್ಯಯ ಪದ :

(ಎ) ನೀನೇ (ಬಿ) ಧಗಧಗ (ಸಿ) ಬೇಗನೆ (ಡಿ) ಆದ್ದರಿಂದ

15) ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು.

(ಎ) ಅಲ್ಪವಿರಾಮ (ಬಿ) ಪೂರ್ಣವಿರಾಮ (ಸಿ) ಅರ್ಧವಿರಾಮ (ಡಿ) ಆವರಣ



downloaded from: www.kpscvaani.com

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

16) ಚೆನ್ನಾಗಿ : ಸಾಮಾನ್ಯಾವ್ಯಯ : : ಸಾಕು : _______________

17) ಕಮಲಾಕ್ಷ : ಅಂಕಿತನಾಮ : : ತಾನು : ____________

18) ತಿನ್ನಲಿ : ವಿಧ್ಯರ್ಥಕ : : ಮಾಡನು : ______________

19) ತಿನ್ನುತ್ತಾನೆ : ವರ್ತಮಾನಕಾಲ : : ತಿಂದನು : ___________

20) ದೊಡ್ಡದು : ಗುಣವಾಚಕ : : ನೋಟ : _______________

21) ಬೇಡ : ಕ್ರಿಯಾರ್ಥಕಾವ್ಯಯ : : ಆದ್ದರಿಂದ : ______________

22) ನದಿ ,ಪರ್ವತ : ರೂಢನಾಮ : : ವ್ಯಾಪಾರಿ ,ವಿಜ್ಞಾನಿ : __________

23) ನಾನು , ನೀನು : ಪುರುಷಾರ್ಥಕ ಸರ್ವನಾಮ : : ಯಾರು ? ಏನು : __________

24) ಅಷ್ಟು : ಪರಿಮಾಣ ವಾಚಕ : : ಹನ್ನೆರಡು : ______________

25) ಅಲ್ಲದೆ : ಸಂಬಂಧಾರ್ಥಕಾವ್ಯಯಗಳು : : ಅದುವೇ : __________________

26) ಬಿಡಿಸದಿರ್ದೊಡೆ : ಬಿಡಿಸದಿದ್ದರೆ : : ಪಸುರ್ಗೆ : ______________

27) ಸೈರಿಸದೆ : ಸಹಿಸಲಾರದೆ : : ಬರ್ಪುದಕಂ: ____________

28) ತಿಂದೆನು : ಭೂತಕಾಲ : : ತಿನ್ನುವನು : ______________

29) ವಿದ್ವಾಂಸ : ಅನ್ವರ್ಥನಾಮ : : ಮನುಷ್ಯ : ___________

30) ಬರೆಯಲಿ : ವಿಧ್ಯರ್ಥಕ : : ಬರೆದಾರು : _______________

*************************************************************************************

**ಉತ್ತರಗಳು : 1) (ಸಿ) ಉದ್ಧರಣ 2) (ಎ) ಭಾವಸೂಚಕ 3) (ಬಿ) ಸಾಕು 4) (ಎ) ತಾವು**

**5) (ಬಿ) ವ್ಯಾಪಾರಿ 6) (ಡಿ) ಧಾತು 7) (ಎ) ಓದರು 8) (ಡಿ) ಕೊಡು 9) (ಎ) ಹಾಡನು**

**10) (ಬಿ) ಕಟ್ಟೆರಿ 11) (ಡಿ) ಮುಟ್ಟು 12) (ಸಿ) ಬರೆಯದು 13) (ಎ) ಭಾವಸೂಚಕ 14) (ಸಿ) ಬೇಗನೆ**

**15) (ಸಿ) ಅರ್ಧವಿರಾಮ 16) ಕ್ರಿಯಾರ್ಥಕಾವ್ಯಯ 17) ಆತ್ಮಾರ್ಥಕ ಸರ್ವನಾಮ 18) ನಿಷೇಧಾರ್ಥಕ**

**19) ಭೂತ ಕಾಲ 20) ಭಾವನಾಮ 21) ಸಂಬಂಧಾರಕಾರ್ಥವ್ಯಯ 22) ಅನ್ವರ್ಥನಾಮ**

**23) ಪ್ರಶ್ನಾರ್ಥಕ ಸರ್ವನಾಮ 24) ಸಂಖ್ಯಾವಾಚಕ 25) ಅವಧಾರಣಾರ್ಥಕಾವ್ಯಯ 26) ಹಸುರಿಗೆ**

**27) ಬರುವುದಕ್ಕೂ 28) ಭವಿಷ್ಯತ್ ಕಾಲ 29) ರೂಢನಾಮ 30) ಸಂಭವನಾರ್ಥಕ**



downloaded from: www.kpscvaani.com

# 21.ಛಂದಸ್ಸು

**ಪದ್ಯರಚನಾ ನಿಯಮವನ್ನು ತಿಳಿಯಪಡಿಸುವ ಶಾಸ್ತ್ರ ಛಂದಸ್ಸು.**

**ಪ್ರಾಸ** : ಪದ್ಯದ ಪ್ರತಿ ಸಾಲಿನ ಆದಿ,ಮಧ್ಯ,ಅಂತ್ಯದಲ್ಲಿ ಒಂದೇ ರೀತಿಯ ವ್ಯಂಜನಾಕ್ಷರಗಳು ನಿಯತವಾಗಿ ಬರುವುದು **'ಪ್ರಾಸ.'**

ಪ್ರತಿಪಾದದ ಒಂದು ಮತ್ತು ಎರಡನೆಯ ಸ್ವರಗಳ ಮಧ್ಯದಲ್ಲಿ ಒಂದೇ ರೀತಿಯ ವ್ಯಂಜನಾಕ್ಷರ ಬಂದರೆ **ಆದಿಪ್ರಾಸ**.
ಪಾದದ ಅಂತ್ಯದಲ್ಲಿ ಬಂದರೆ ಅಂತ್ಯಪ್ರಾಸ.
ಪಾದದ ಮಧ್ಯದಲ್ಲಿ ಬಂದರೆ ಮಧ್ಯಪ್ರಾಸ (ಒಳಪ್ರಾಸ)

**ಯತಿ** : ಕಾವ್ಯವನ್ನು ಓದುವಾಗ ಉಸಿರು ತೆಗೆದು ಕೊಳ್ಳುವ ಸಲುವಾಗಿ ನಿಲ್ಲಿಸುವ ಸ್ಥಳ **'ಯತಿ'**
ಕಾವ್ಯವನ್ನು ಓದುವಾಗ ಅಥವಾ ಹಾಡುವಾಗ ಅರ್ಥಕ್ಕೆ ಲೋಪಬಾರದಂತೆ ನಿಲ್ಲಿಸುವ ಸ್ಥಳವನ್ನು **'ಯತಿ'** ಎಂದು ಗುರುತಿಸಲಾಗಿದೆ.

ಗಣಗಳು : ಗಣ ಎಂದರೆ **'ಗುಂಪು'** ಅಥವಾ **'ಸಮೂಹ'** ಎಂದರ್ಥ. ಛಂದಶ್ಶಾಸ್ತ್ರದಲ್ಲಿ **'ಗಣ'** ಎಂದರೆ ಪದ್ಯದ ಪ್ರತಿ ಸಾಲಿನಲ್ಲೂ ವಿಭಾಗಿಸಲ್ಪಡುವ **ಮಾತ್ರೆ** ಅಥವಾ **ಅಕ್ಷರ** ಅಥವಾ **ಅಂಶಗಳ** ಗುಂಪು ಎಂದರ್ಥ.

- ♣ ಅಕ್ಷರಗಳ ಲೆಕ್ಕಾಚಾರಗಳೊಂದಿಗೆ ವಿಭಾಗಿಸಲ್ಪಡುವ ಗಣ **ಅಕ್ಷರಗಣ.**
- ♣ ಮಾತ್ರೆಗಳ ಲೆಕ್ಕಾಚಾರದೊಂದಿಗೆ ವಿಭಾಗಿಸಲ್ಪಡುವ ಗಣ **ಮಾತ್ರಾಗಣ.**
- ♣ ಅಂಶಗಳ ಆಧಾರದಿಂದ ವಿಭಾಗಿಸಲ್ಪಡುವ ಗಣವನ್ನು **ಅಂಶಗಣ.**

**ಅಂಶಗಣದಲ್ಲಿ 3 ವಿಧ–** (ಬ್ರಹ್ಮ (2ಅಂಶ),ವಿಷ್ಣು (3ಅಂಶ),ರುದ್ರ (4ಅಂಶ))

## ಅಕ್ಷರಗಣ

ಮೂರು ಮೂರು ಅಕ್ಷರಗಳಿಗೆ ಒಂದರಂತೆ ಗಣ ವಿಭಾಗ ಮಾಡುವ ಕ್ರಮವೇ **ಅಕ್ಷರಗಣ.**
ಅಕ್ಷರಗಣಗಳಲ್ಲಿ ಎಂಟು ವಿಧದ ಗಣಗಳಿವೆ.

**ಯಮಾತಾರಾಜಭಾನಸ ಲಗಂ**

| ಗಣಗಳು | ಮಾತ್ರಾವಿನ್ಯಾಸ | ಗಣಗಳು | ಮಾತ್ರಾವಿನ್ಯಾಸ |
|---|---|---|---|
| 1) ಯಗಣ | U – – | 5) ಜಗಣ | U – U |
| 2) ಮಗಣ | – – – | 6) ಭಗಣ | – U U |
| 3) ತಗಣ | – – U | 7) ನಗಣ | U U U |
| 4) ರಗಣ | – U – | 8) ಸಗಣ | U U – |



downloaded from: www.kpscvaani.com

ಗುರು ಲಘು ಮೂರಿರೆ ಮ – ನ – ಗಣ ।
ಗುರು ಲಘು ಮೊದಲಿರೆ ಭ – ಯ – ಗಣಮೆಂಬರ್ ॥
ಗುರು ಲಘು ನಡುವಿರೆ ಜ – ರ – ಗಣ ।
ಗುರು ಲಘು ಕೊನೆಯಿರೆ ಸ – ತ – ಗಣ ಮಕ್ಕುಂ ॥

## ಮಾತ್ರಾಗಣ

- ಒಂದು ಅಕ್ಷರವನ್ನು ಉಚ್ಚರಿಸಲು ಬೇಕಾದ ಕಾಲವನ್ನು **'ಮಾತ್ರೆ' ಎಂದು ಕರೆಯಲಾಗುತ್ತದೆ.**
- ಮಾತ್ರೆಗಳ ಆಧಾರದಿಂದ **'ಗಣ'** ವಿಭಾಗ ಮಾಡಿದರೆ ಅದನ್ನು **'ಮಾತ್ರಾಗಣ'**
- **ಮೂರು, ನಾಲ್ಕು , ಐದು** ಮಾತ್ರೆಗಳ ಗಣಗಳನ್ನು ಮಾಡಲಾಗುವುದು.
- ಮಾತ್ರೆಗಳಲ್ಲಿ ಎರಡು ವಿಧಗಳಿವೆ. ಅವುಗಳು: **1) ಗುರು 2) ಲಘು**

→ಒಂದುಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರ **'ಲಘು' ಚಿಹ್ನೆ** 'U'

→ಎರಡು ಅಥವಾ ಎರಡಕ್ಕಿಂತ ಹೆಚ್ಚುಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರವನ್ನು **'ಗುರು' ಚಿಹ್ನೆ** '–'.

### ಪ್ರಸ್ತಾರಹಾಕುವುದು(ಲಘು–ಗುರು ಹಾಕುವುದು)

- ✓ ಹ್ರಸ್ವಸ್ವರಗಳು ಮತ್ತು ಹ್ರಸ್ವಸ್ವರಸಹಿತ ವ್ಯಂಜನಾಕ್ಷರಗಳು ಲಘು ಆಗುತ್ತವೆ.( U ) * (ಶಿಥಿಲದಿತ್ವ)
- ✓ ದೀರ್ಘಸ್ವರಗಳು ಮತ್ತು ದೀರ್ಘಸ್ವರಸಹಿತ ವ್ಯಂಜನಾಕ್ಷರಗಳು ಗುರು (–) ಆಗುತ್ತವೆ.
- ✓ ಒತ್ತಕ್ಷರದ ಹಿಂದಿನ ಅಕ್ಷರ ಅಕ್ಷರ ಗುರು (–) ಆಗುತ್ತವೆ.
- ✓ ಅನುಸ್ವಾರ ಅಥವಾ ವಿಸರ್ಗಗಳಿಂದ ಕೂಡಿರುವ ಅಕ್ಷರ ಗುರು (–) ಆಗುತ್ತವೆ.
- ✓ ವ್ಯಂಜನಾಕ್ಷರದ ಹಿಂದಿನ ಅಕ್ಷರ ಗುರು (–) ಆಗುತ್ತವೆ.
- ✓ ಷಟ್ಪದಿಯ ಮೂರು ಮತ್ತು ಆರನೆಯ ಕೊನೆ ಅಕ್ಷರ ಲಘು ಇದ್ದರೂ ಗುರು (–) ಆಗುತ್ತವೆ.

**ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.**

**ಅಂಕ ವಿತರಣೆ**
– ಪ್ರಸ್ತಾರ 1 ಅಂಕ
– ಗಣ ವಿಭಾಗ 1 ಅಂಕ
– ಛಂದಸ್ಸಿನ ಹೆಸರು 1 ಅಂಕ
– ಒಟ್ಟು 3 ಅಂಕಗಳು

**(2016 ಜೂನ್)**

## ಕಂದಪದ್ಯ

**ಲಕ್ಷಣಗಳು:**

- ಇದು ನಾಲ್ಕು ಸಾಲಿನ ಪದ್ಯ – ನಾಲ್ಕು ಮಾತ್ರೆಗೆ ಒಂದೊಂದು ಗಣ ವಿಂಗಡಿಸಬೇಕು.
- ಒಂದು ಮತ್ತು ಮೂರನೆಯ ಪಾದಗಳು ಸಮಾನಾಗಿದ್ದು ,ನಾಲ್ಕು ಮಾತ್ರೆಗಳ ಮೂರು ಮೂರು ಗಣಗಳು ಬರುತ್ತವೆ.



downloaded from: www.kpscvaani.com

- ಎರಡು ಮತ್ತು ನಾಲ್ಕನೆಯ ಪಾದಗಳು ಸಮಾನವಾಗಿದ್ದು ನಾಲ್ಕು ಮಾತ್ರೆಗಳ ಐದೈದು ಗಣಗಳು ಬರುತ್ತವೆ.
- ಛಂದಸ್ಸು ಗುರುತಿಸಲು ಎರಡು ಸಾಲುಗಳನ್ನು ನೀಡಲಾಗುತ್ತದೆ.

ಉದಾಹರಣೆ :

| | | | | |
|---|---|---|---|---|
| UUUU | U U – | UU – | | |
| ಅತಿಕುಟಿ | ಲ ಮನಂ | ಧನಲು | | |
| UU – | – – | U – U | U U – | U U – |
| ಬ್ಧತೆಯಿಂ | ದಂದು | ಷ್ಟಬುದ್ಧಿ | ನುಡಿದ ಂ | ಪುಸಿಯಂ |

| | | |
|---|---|---|
| 4 | 4 | 4 |

12

| | | | | |
|---|---|---|---|---|
| 4 | 4 | 4 | 4 | 4 |

20

**ಛಂದಸ್ಸು – ಕಂದ ಪದ್ಯ**

4 4 4 =12

| | | |
|---|---|---|
| – U U | – U U | – U U |
| ಪುಟ್ಟಿದ | ನೂರ್ವರು | ಮೆನ್ನೊಡ |

12

4 4 4 4 4 =20

| | | | | |
|---|---|---|---|---|
| – U U | – U U | U – U | – U U | – – |
| ವುಟ್ಟಿದ | ನೂರ್ವರು | ಮಿದಿರ್ಚೆ | ಸತ್ತೊಡೆ | ಕೋಪಂ |

20

**ಛಂದಸ್ಸು– ಕಂದ ಪದ್ಯ**

4 4 4 = 12

| | | |
|---|---|---|
| – – | U – U | U U – |
| ಅಂತೆಂ | ಬನಾರ್ಗೆ | ಪಿರಿದುಂ |

4 4 4 4 4 = 12

| | | | | |
|---|---|---|---|---|
| – – | – – | U – U | – – | U U – |
| ಭ್ರಾಂತುದ | ಲೇಂ ದ್ರೋ | ಣನೆಂಬ | ನೇಂ ಪಾ | ರ್ವನೆ ಪೇ |

**ಛಂದಸ್ಸು– ಕಂದ ಪದ್ಯ**



downloaded from: www.kpscvaani.com

| 4 | 4 | 4 | = 12 |
|---|---|---|---|
| – U U | U – U | – U U | |
| ಕಾದದಿ | ರೆನಜ್ಜ | ಪಾಂಡವ | |

| 4 | 4 | 4 | 4 | 4 | = 12 |
|---|---|---|---|---|---|
| – – | – – | U – U | U U U U | – – | |
| ರಾದರ್ | ಮೇಣಿಂ | ದಿನೊಂದೆ | ಸಮರದೊ | ಳಾಂ ಮೇ | |

ಛಂದಸ್ಸು– ಕಂದ ಪದ್ಯ

↓ ಅಭ್ಯಾಸಕ್ಕಾಗಿ............

ಮತಿಗೆಟ್ಟು ತಸ್ಕರಸ್ಯಾ

ನೃತಂ ಬಲಂ ಎನಿಪ ವಾಕ್ಯವಂ ನೆನೆಯುತ್ತುಂ

ನೆಲಕಿಱಿವೆನೆಂದು ಬಗೆದಿರೆ

ಚಲಕಿಱಿವೆಂ ಪಾಂಡುಸುತರೊಳೀನೆಲನಿದು ಪಾ

## ಷಟ್ಪದಿ

**ಸಾಮಾನ್ಯ ಲಕ್ಷಣಗಳು**

- ಆರು ಸಾಲುಗಳಿರುತ್ತವೆ.
- ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳು ಮಾತ್ರಾ ಸಂಖ್ಯೆಯಲ್ಲಿ ಒಂದಕ್ಕೊಂದು ಸಮಾನವಾಗಿರುತ್ತವೆ. ಮೂರು ಮತ್ತು ಆರನೆಯ ಪಾದಗಳು ಪರಸ್ಪರ ಸಮವಾಗಿರುತ್ತವೆ.

**ಷಟ್ಪದಿ ವಿಧಗಳು**

**ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ** ಮತ್ತು **ವಾರ್ಧಕ**



downloaded from: www.kpscvaani.com

# ಭಾಮಿನಿ ಷಟ್ಪದಿ

**ಲಕ್ಷಣ :**

ϒ – ಆರು ಸಾಲುಗಳಿರುತ್ತವೆ.

ϒ – ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳು ಸಮಾನವಾಗಿದ್ದು ಪ್ರತಿಪಾದದಲ್ಲೂ ಮೂರು ಮಾತ್ರೆಯ ಮುಂದೆ ನಾಲ್ಕು ಮಾತ್ರೆಗಳು ಬರುವ ಹಾಗೆ (3 । 4 । 3 । 4 ) ತಲಾ ಎರಡೆರಡು ಗಣಗಳು ಗಣಗಳಿರುತ್ತವೆ.

ϒ – ಮೂರು ಮತ್ತು ಆರನೆಯ ಪಾದಗಳು ಪರಸ್ಪರ ಸಮನಾಗಿದ್ದು ಪ್ರತಿಪಾದದಲ್ಲೂ ಮೂರು ಮಾತ್ರೆಯ ಮುಂದೆ ನಾಲ್ಕು ಮಾತ್ರೆಗಳು ಬರುವ ಹಾಗೆ (3 । 4 । 3 । 4 । 3 । 4 ) ತಲಾ ಮೂರು–ಮೂರು ಗಣಗಳಿರುತ್ತವೆ ಮತ್ತು ಕೊನೆಯಲ್ಲಿ ಒಂದು ಗುರು ಇರುತ್ತದೆ.

*** ಪರೀಕ್ಷೆಯಲ್ಲಿ ಛಂದಸ್ಸು ಗುರುತಿಸಲು ಮೂರು ಸಾಲುಗಳನ್ನು ನೀಡಲಾಗುತ್ತದೆ.**

**ಉದಾಹರಣೆ :**

3 4 3 4 =14

| | | | |
|---|---|---|---|
| – U | – U U | – U | U U U U |
| **ಮಕ್ಕ** | **ಳೈವರೊ** | **ಳಾನು** | **ಹಿರಿಯನು** |

3 4 3 4 =14

| | | | |
|---|---|---|---|
| – U | – U U | – U | – – |
| **ತಕ್ಕ** | **ಮಾತೆಯ** | **ಮಾತು** | **ಸಂದೇ** |

3 4 3 4 3 4 ಗು =21+ಗುರು

| | | | | | | |
|---|---|---|---|---|---|---|
| – U | U U – | U U U | U U – | U U U | U U U U | – |
| **ಹಕ್ಕೆ** | **ನೆಲೆಯಿ** | **ಲ್ಲದುನಿ** | **ಲಲಿಧಾ** | **ರುಣಿಯ** | **ಬಯಸುವ** | **ರೆ** |

**ಛಂದಸ್ಸು– ಭಾಮಿನಿ ಷಟ್ಪದಿ**



downloaded from: www.kpscvaani.com

* ಕುಮಾರವ್ಯಾಸನ ಕೌರವೇಂದ್ರನ ಕೊಂದೆ ನೀನು ಪದ್ಯಗಳ ಉದಾಹರಣೆ ಕೊಟ್ಟಿದ್ದರೆ ಅದು ಭಾಮಿನಿ ಷಟ್ಪದಿ

**ಉದಾಹರಣೆ :**

(2016 ಮಾರ್ಚ್)

3 4 3 4 =14

| | | | |
|---|---|---|---|
| – U | – – | –U | – – |
| ಏನು | ಹೇಳೈ | ಕರ್ಣ | ಚಿತ್ತ |

3 4 3 4 =14

| | | | |
|---|---|---|---|
| – U | – U U | UUU | – – |
| ಗ್ಲಾನಿ | ಯಾವುದು | ಮನಕೆ | ಕುಂತೀ |

3 4 3 4 3 4 1ಗುರು =21+ 1ಗುರು

| | | | | | | |
|---|---|---|---|---|---|---|
| – U | UU UU | –U | – U U | – U | – UU | – |
| ಸೂನು | ಗಳ ಬೆಸ | ಕೈಸಿ | ಕೊಂಬುದು | ಸೇರ | ದೇನಿನ | ಗೆ |

ಛಂದಸ್ಸು– ಭಾಮಿನಿ ಷಟ್ಪದಿ

3 4 3 4 =14

| | | | |
|---|---|---|---|
| UUU | – UU | – U | – UU |
| ಇನತ | ನೂಜನ | ಕೂಡೆ | ಮೈದುನ |

3 4 3 4 =14

| | | | |
|---|---|---|---|
| UUU | UUUU | UUU | UUUU |
| ತನದ | ಸರಸವ | ನೆಸಗಿ | ರಥದೊಳು |

3 4 3 4 3 4 1ಗುರು =21+ 1ಗುರು

| | | | | | | |
|---|---|---|---|---|---|---|
| UUU | UU UU | UUU | –UU | UUU | – UU | – |
| ಧನುಜ | ರಿಪು ಬರ | ಸೆಳೆದು | ಕುಳ್ಳಿರಿ | ಸಿದನು | ಪೀಠದ | ಲಿ |

ಛಂದಸ್ಸು– ಭಾಮಿನಿ ಷಟ್ಪದಿ

↓ ಅಭ್ಯಾಸಕ್ಕಾಗಿ

ಮಾರಿಗೌತಣವಾಯ್ತು ನಾಳಿನ

ಭಾರತವು ಚತುರಂಗ ಬಲದಲಿ

ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು

downloaded from: www.kpscvaani.com

ಭೇದವಿಲ್ಲೆಲೆ ಕರ್ಣ ನಿಮ್ಮೊಳು

ಯಾದವರು ಕೌರವರೊಳಗೆ ಸಂ

ವಾದಿಸುವಡನ್ವಯಕೆ ಮೊದಲೆರಡಿಲ್ಲ ನಿನ್ನಾಣೆ

## ವಾರ್ಧಕ ಷಟ್ಪದಿ

**ಲಕ್ಷಣ :**

- ಆರು ಸಾಲುಗಳಿರುತ್ತವೆ
- ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳು ಮಾತ್ರಾಸಂಖ್ಯೆಯಲ್ಲಿ ಸಮಾನವಾಗಿದ್ದು ಐದು ಮಾತ್ರೆಗಳ ನಾಲ್ಕು ಗಣಗಳು ಪ್ರತಿಪಾದದಲ್ಲೂ ಇರುತ್ತವೆ.
- ಮೂರು ಮತ್ತು ಆರನೆಯ ಪಾದಗಳು ಸಮಾನವಾಗಿದ್ದು ಐದು ಮಾತ್ರೆಗಳ ಆರಾರು ಗಣಗಳು ಪ್ರತಿಪಾದದಲ್ಲೂ ಇದ್ದು ಕೊನೆಯಲ್ಲಿ ಒಂದೊಂದು ಗುರು ಇರುತ್ತದೆ.

*** ಪರೀಕ್ಷೆಯಲ್ಲಿ ಛಂದಸ್ಸು ಗುರುತಿಸಲು ಮೂರು ಸಾಲುಗಳನ್ನು ನೀಡಲಾಗುತ್ತದೆ.**

*** ಲಕ್ಷ್ಮೀಶನ 'ವೀರಲವ' ಪದ್ಯಗಳ ಉದಾಹರಣೆ ಕೊಟ್ಟಿದ್ದರೆ ಅದು 'ವಾರ್ಧಕ ಷಟ್ಪದಿ'.**

5 5 5 5 =20

| 5 | 5 | 5 | 5 |
|---|---|---|---|
| – U – | – UU | UUU UU | – – U |
| ಉರ್ವಿಯೊಳ್ | ಕೌಸಲ್ಯೆ | ಪಡೆದ ಕುವ | ರಂ ರಾಮ |

5 5 5 5 =20

| | | | |
|---|---|---|---|
| – U – | – U – | UU – U | UUU U U |
| ನೊರ್ವನೇ | ವೀರನಾ | ತನ ಯಜ್ಞ | ತುರಗಮಿದು |

5 5 5 5 5 5 1ಗುರು =30+1ಗುರು

| | | | | | | |
|---|---|---|---|---|---|---|
| – U UU | – U – | – U – | UUU – | – U – | UU U – | – |
| ನಿರ್ವಹಿಸ | ಲಾರ್ಪರಾ | ರಾದೊಡಂ | ತಡೆಯಲೆಂ | ದಿರ್ದಲೇ | ಖನ ವನೋ | ದಿ |

**ಛಂದಸ್ಸು – ವಾರ್ಧಕ ಷಟ್ಪದಿ**



downloaded from: www.kpscvaani.com

📖 **ಅಭ್ಯಾಸಕ್ಕಾಗಿ**

ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ

ತೊತ್ತಳದುಳಿದುದು ವಾಲ್ಮೀಕಿಮುನಿನಾಥನೇ

ಪೊತ್ತುಮಾರ್ೈವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ

## ವೃತ್ತಗಳು

ಅಕ್ಷರಗಣಗಳ ಶಾಸ್ತ್ರಕ್ಕನುಗುಣವಾಗಿ ರಚಿಸಲ್ಪಟ್ಟ ಪದ್ಯಗಳನ್ನು **ವೃತ್ತಗಳು.**
ಆರು ಖ್ಯಾತ ಕರ್ನಾಟಕ ವೃತ್ತಗಳಿವೆ.

| ಖ್ಯಾತ ಕರ್ನಾಟಕ ವೃತ್ತಗಳು | | |
|---|---|---|
| 1) **ಉತ್ಪಲ ಮಾಲಾ ವೃತ್ತ** | 3) **ಸ್ರಗ್ಧರಾ ವೃತ್ತ** | 5) **ಶಾರ್ದೂಲ ವಿಕ್ರೀಡಿತ ವೃತ್ತ** |
| 2) **ಚಂಪಕ ಮಾಲಾ ವೃತ್ತ** | 4) **ಮಹಾಸ್ರಗ್ಧರಾ ವೃತ್ತ** | 6) **ಮತ್ತೇಭ ವಿಕ್ರೀಡಿತ ವೃತ್ತ** |

- **ಆರು ವೃತ್ತಗಳನ್ನು ಗುರುತಿಸುವ ಪದ್ಯ**

**ಗುರುವೊಂದಾದಿಯೊಳುತ್ಪಲಂ ಗುರುಮೊದಲ್ ಮೂರಾಗೆ ಶಾರ್ದೂಲಮಾ**

**ಗುರುನಾಲ್ಕಾಗಿರಲಂತು ಸ್ರಗ್ಧರೆ ಲಘು ದ್ವಂದ್ವಂ ಗುರುದ್ವಂದ್ವಮಾ**

**ಗಿರೆ ಮತ್ತೇಭ ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ**

**ಹರಿಣಾಕ್ಷೀ, ಲಘು ನಾಲ್ಕು ಚಂಪಕಮಿವಾಱುಂ ಖ್ಯಾತಕರ್ಣಾಟಕಂ**

**ವೃತ್ತಗಳ ಸಾಮಾನ್ಯ ಲಕ್ಷಣಗಳು :**

- ನಾಲ್ಕು ಪಾದಗಳಿರುತ್ತವೆ.
- ಅಕ್ಷರಗಳ ಸಂಖ್ಯೆ ಮತ್ತು ಗಣಗಳ ವಿಧಗಳಲ್ಲಿ ನಾಲ್ಕುಸಾಲುಗಳು ಸಮಾನವಾಗಿರುತ್ತದೆ.
- ಆದಿಪ್ರಾಸದಿಂದ ಕೂಡಿರುತ್ತದೆ.

**ಪರೀಕ್ಷೆಯಲ್ಲಿ ಛಂದಸ್ಸು ಗುರುತಿಸಲು ಒಂದು ಸಾಲನ್ನು ನೀಡಿರುತ್ತಾರೆ.**



downloaded from: www.kpscvaani.com

## 1. ಉತ್ಪಲಮಾಲಾವೃತ್ತ

ಲಕ್ಷಣಗಳು :

- 20 ಅಕ್ಷರಗಳು ಇರುತ್ತವೆ
- 28 ಮಾತ್ರೆಗಳಿರುತ್ತವೆ.
- ಭ, ರ, ನ, ಭ, ಭ, ರ, ಗಣಗಳು ಮತ್ತು ಕೊನೆಯಲ್ಲಿ ಒಂದು ಲಘು ಮತ್ತು ಒಂದು ಗುರು ಇರುತ್ತವೆ.
- ಪಾದದ ಆದಿಯಲ್ಲಿ ಒಂದು ಗುರು ಬಂದಿರುತ್ತದೆ. (ಗುರು ಒಂದು ಆದಿಯೊಳ್ ಉತ್ಪಲಂ)

(20 ಅಕ್ಷರಗಳು / 28 ಮಾತ್ರೆಗಳು / 'ಭರನಭಭರ'ಲಗ ಗಣಗಳು / ಪಾದದ ಆದಿಯಲ್ಲಿ – [ಗುರು])

**ಉದಾಹರಣೆ :–**

**ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತನಭೋವಿಭಾಗಮಾ**

| ಭ | ರ | ನ | ಭ | ಭ | ರ | ಲಗ |
|---|---|---|---|---|---|---|
| – UU | – U – | UUU | – U U | – UU | – U – | U– |
| ಮೇದಿನಿ | ಯಂ ಕ್ರಮ | ಕ್ರಮದೆ | ಪರ್ವಿದು | ದಾತ್ತನ | ಭೋವಿಭಾ | ಗಮಾ |

**ಛಂದಸ್ಸು– ಉತ್ಪಲ ಮಾಲಾ ವೃತ್ತ**

**ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು।**
**ಳ್ಳನ್ನೆಗ**

| ಭ | ರ | ನ | ಭ | ಭ | ರ | ಲಗ |
|---|---|---|---|---|---|---|
| – UU | – U – | U U U | – U U | – UU | – U – | U – |
| ಎನ್ನಣು | ಗಾಳನೆ | ನ್ನಣುಗ | ದಮ್ಮನ | ನಿಕ್ಕಿದ | ಪಾರ್ಥಭೀ | ಮರು |

ಳ್ಳನ್ನೆಮ್

**ಛಂದಸ್ಸು– ಉತ್ಪಲ ಮಾಲಾ ವೃತ್ತ**



downloaded from: www.kpscvaani.com

✍ **ಅಭ್ಯಾಸಕ್ಕಾಗಿ**

ಚಾಗದ ಭೋಗದಕ್ಕರದಗೇಯದ ಗೊಟ್ಟಿಯಲಂಪಿನಿಂ ಪುಗಳ್

## 2. ಚಂಪಕ ಮಾಲಾ ವೃತ್ತ

**ಲಕ್ಷಣಗಳು :**

- 21 ಅಕ್ಷರಗಳು ಇರುತ್ತವೆ.
- 28 ಮಾತ್ರೆಗಳು ಇರುತ್ತವೆ.
- ನ, ಜ, ಭ, ಜ, ಜ, ಜ, ರ ಗಣಗಳು ಬರುತ್ತವೆ.
- ಪಾದದ ಆದಿಯಲ್ಲಿ 4 ಲಘು ಬರುತ್ತದೆ. (ಲಘು ನಾಲ್ಕಾಗಿರಲ್ ಚಂಪಕಂ )

**{ 21 ಅಕ್ಷರಗಳು / 28 ಮಾತ್ರೆಗಳು / 'ನಜಭಜಜಜರ' ಗಣಗಳ / ಪಾದದ ಆದಿಯಲ್ಲಿ UUUU (ನಾಲ್ಕು ಲಘು) }**

**ಉದಾಹರಣೆ :-**

1) **ಖಳನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂ**

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| U U U | U – U | – U U | U – U | U – U | U – U | – U – |
| ಖಳನೊ | ಳವಿಂಗೆ | ಕುಪ್ಪೆ ವ | ರಮೆಂಬ | ವೊಲಾಂಬ | ರಮುಂಟೆ | ನಿನ್ನದೊಂ |

**ಛಂದಸ್ಸು – ಚಂಪಕ ಮಾಲಾ ವೃತ್ತ**

2) **ತಳವೆಳಗಾಗೆ ಕಟ್ಟಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತನೇ**

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| UUU | U – U | – U U | U – U | U – U | U – U | – U – |
| ತಳವೆ | ಳಗಾಗೆ | ಕಟ್ಟಸ | ದೆ ಮಾಣ್ದೊ | ಡೆ ಕೆಮ್ಮ | ನೆ ಮೀಸೆ | ವೊತ್ತನೇ |

**ಛಂದಸ್ಸು – ಚಂಪಕ ಮಾಲಾ ವೃತ್ತ**



downloaded from: www.kpscvaani.com

**ಅಭ್ಯಾಸಕ್ಕಾಗಿ**

**ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ**

ನೆಱೆಗೊಳೆ ಕುಂಭಸಂಭವನನಾ ದ್ರುಪದಂ ಕಡುಸಿಗ್ಗು ಮಾಡಿದಂ

## 3.ಸ್ರಗ್ಧರಾ ವೃತ್ತ

**ಲಕ್ಷಣಗಳು :**

- 21 ಅಕ್ಷರಗಳು ಇರುತ್ತವೆ.
- 33 ಮಾತ್ರೆಗಳು ಇರುತ್ತವೆ.
- ಮ,ರ,ಭ,ನ,ಯ,ಯ,ಯ ಗಣಗಳು ಬರುತ್ತವೆ.
- ಪಾದದ ಆದಿಯಲ್ಲಿ 4 ಗುರು ಬರುತ್ತದೆ. (ಗುರುನಾಲ್ಕಾಗಿರಲಂತು ಸ್ರಗ್ಧರೆ)

**{ 21 ಅಕ್ಷರಗಳು / 33 ಮಾತ್ರೆಗಳು /'ಮರಭನಯಯಯ'ಗಣಗಳ / ಪಾದದ ಆದಿಯಲ್ಲಿ ---- (ನಾಲ್ಕು ಗುರು) }**

**ಸೂಱೆಸೈಸೆಟ್ಟೆಚ್ಚುಬಿಲ್ಲಂರಥದ ಕುದುರೆಯಂಸೂತನಂಖಂಡಿಸುತ್ತಾ**

| ಮ | ರ | ಭ | ನ | ಯ | ಯ | ಯ |
|---|---|---|---|---|---|---|
| – – – | – U – | – UU | UUU | U – – | U – – | U – – |
| **ಸೂಱೆಸೈಸೆ** | **ಟ್ಟೆಚ್ಚುಬಿ** | **ಲ್ಲಂರಥ** | **ದಕುದು** | **ರೆಯಂಸೂ** | **ತನಂಖಂ** | **ಡಿಸುತ್ತಾ** |

**ಛಂಧಸ್ಸು :ಸ್ರಗ್ಧರಾ ವೃತ್ತ**



downloaded from: www.kpscvaani.com

## 4) ಮಹಾಸ್ರಗ್ಧರಾ ವೃತ್ತ

ಲಕ್ಷಣಗಳು :

- ✸ 22 ಅಕ್ಷರಗಳು ಇರುತ್ತವೆ.
- ✸ 33 ಮಾತ್ರೆಗಳು ಇರುತ್ತವೆ.
- ✸ ಸ,ತ,ತ,ನ,ಸ,ರ,ರ,ಗ ಗಣಗಳು ಬರುತ್ತವೆ.
- ✸ ಪಾದದ ಆದಿಯಲ್ಲಿ 2 ಲಗು 3 ಗುರು ಬರುತ್ತದೆ. (ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ)

{22 ಅಕ್ಷರಗಳು /33 ಮಾತ್ರೆಗಳು /'ಸತತನಸರರ ಗ'ಗಣಗಳ /ಪಾದದ ಆದಿಯಲ್ಲಿ U U ▪ ▪ ▪ (2ಲಗು3 ಗುರು) }

ಇದುಚಕ್ರವ್ಯೂಹ ಮಿಾವ್ಯೂಹಮನೊಡೆವದಟಂ ಪಾರ್ಥನಂ ತಾತನುಂಗೆಂ

| ಸ | ತ | ತ | ನ | ಸ | ರ | ರ | ಗು |
|---|---|---|---|---|---|---|---|
| U U – | – – U | – – U | U U U | U U – | – U – | – U – | – |
| ಇದುಚ | ಕ್ರವ್ಯೂಹ | ಮಿಾವ್ಯೂಹ | ಮನೊಡೆ | ವದಟಂ | ಪಾರ್ಥನಂ | ತಾತನುಂ | ಗೆಂ |

ಛಂಧಸ್ಸು : ಮಹಾಸ್ರಗ್ಧರಾ ವೃತ್ತ

## 5.ಶಾರ್ದೂಲ ವಿಕ್ರೀಡಿತ ವೃತ್ತ

ಲಕ್ಷಣಗಳು :

- ✸ 19 ಅಕ್ಷರಗಳು ಇರುತ್ತವೆ.
- ✸ 30 ಮಾತ್ರೆಗಳು ಇರುತ್ತವೆ.
- ✸ ಮ, ಸ, ಜ, ಸ, ತ, ತ, ಗ ಗಣಗಳು ಬರುತ್ತವೆ.
- ✸ ಪಾದದ ಆದಿಯಲ್ಲಿ 3 ಗುರು ಬರುತ್ತದೆ. (ಗುರುಮೊದಲ್ ಮೂರಾಗೆ ಶಾರ್ದೂಲಮಾ)

{ 19 ಅಕ್ಷರಗಳು / 30 ಮಾತ್ರೆಗಳು /'ಮಸಜಸತತ ಗ'ಗಣಗಳ / ಪಾದದ ಆದಿಯಲ್ಲಿ ▪ ▪ ▪ (ಮೂರು ಗುರು) }

ಉದಾಹರಣೆ :

ಮಾತಂಗಾ ಸುರವೈರಿಯಲ್ಲಿ ಪಡೆದುಂ ಬಿಲ್ಲಂಧನುರ್ವಿದ್ಯೆ ಗಂ

| ಮ | ಸ | ಜ | ಸ | ತ | ತ | ಗು |
|---|---|---|---|---|---|---|
| - - - | U U - | U - U | U U - | - - U | - - U | - |
| ಮಾತಂಗಾ | ಸುರವೈ | ರಿಯಲ್ಲಿ | ಪಡೆದುಂ | ಬಿಲ್ಲಂಧ | ನುರ್ವಿದ್ಯೆ | ಗಂ |

ಛಂದಸ್ಸು : ಶಾರ್ದೂಲ ವಿಕ್ರೀಡಿತ ವೃತ್ತ

downloaded from: www.kpscvaani.com

## 6. ಮತ್ತೇಭ ವಿಕ್ರೀಡಿತ ವೃತ್ತ

ಲಕ್ಷಣಗಳು :

- 20 ಅಕ್ಷರಗಳು ಬರುತ್ತವೆ.
- 30 ಮಾತ್ರೆಗಳು ಬರುತ್ತವೆ.
- **ಸ,ಭ,ರ,ನ,ಮ,ಯ** ಗಣಗಳು ಮತ್ತು ಕೊನೆಯಲ್ಲಿ ಒಂದು ಲಘು ಮತ್ತು ಒಂದು ಗುರು ಬರುತ್ತದೆ.
- ಪಾದದ ಆದಿಯಲ್ಲಿ 2 ಲಘು 2 ಗುರು ಬರುತ್ತವೆ. ( ಲಘು ದ್ವಂದ್ವಂ ಗುರುದ್ವಂದ್ವಮಾಗಿರೆ ಮತ್ತೇಭ )

**( 20 ಅಕ್ಷರಗಳು/30 ಮಾತ್ರೆಗಳು/ 'ಸಭರನಮಯ' ಲಗ ಗಣಗಳು/ಪಾದದ ಆದಿಯಲ್ಲಿ UU-- )**

**ಉದಾಹರಣೆ :-**

ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸ
ಜ್ಜರೆಯೊಳ್

| ಸ | ಭ | ರ | ನ | ಮ | ಯ | ಲಗ |
|---|---|---|---|---|---|---|
| UU – | – U U | – U – | UUU | – – – | U – – | U – |
| ಕೆರೆಯಂ ಜ್ಜರೆ | ಕಟ್ಟಿಸು | ಬಾವಿಯಂ | ಸವೆಸು | ದೇವಾಗಾ | ರಮಂ ಮಾ | ಡಿಸ |

**ಛಂದಸ್ಸು – ಮತ್ತೇಭ ವಿಕ್ರೀಡಿತ ವೃತ್ತ**



downloaded from: www.kpscvaani.com

# ಛಂದಸ್ಸುಗಳ ಮುಖ್ಯಾಂಶಗಳ ಪಟ್ಟಿ

| ಛಂದಸ್ಸು | ಸಾಲುಗಳು | ಛಂದಸ್ಸು ಗುರಿತಿಸಲು ನೀಡುವ ಸಾಲುಗಳು | ಅಕ್ಷರಗಳ ಸಂಖ್ಯೆ ಮೊದಲ ಸಾಲು | ಮಾತ್ರೆಗಳ ಸಂಖ್ಯೆ ಪೂರ್ವಾರ್ಧ | ಗಣಗಳು (ಲ–ಲಘು, ಗ–ಗುರು) ಪೂರ್ವಾರ್ಧ | ಪಾದದ ಆದಿಯ ಲಕ್ಷಣ | ನಾಗವರ್ಮನ ಪ್ರಕಾರ ಪಾದದ ಆದಿ ಸೂತ್ರ |
|---|---|---|---|---|---|---|---|
| ಕಂದ | 4 | 2 | | 12<br>20 | 4/4/4<br>4/4/4/4/4 | | |
| ಭಾಮಿನಿ ಷಟ್ಪದಿ | 6 | 3 | | 14<br>14<br>21+ 1ಗುರು | 3/4/3/4<br>3/4/3/4<br>3/4/3/4/3/4/– (1ಗುರು) | | |
| ವಾರ್ಧಕ ಷಟ್ಪದಿ | 6 | 3 | | 20<br>20<br>30+ 1ಗುರು | 5/5/5/5<br>5/5/5/5<br>5/5/5/5/5/5/– (1ಗುರು) | | |

## ಖ್ಯಾತಕರ್ಣಾಟಕ ವೃತ್ತಗಳು

| | | | | | | | |
|---|---|---|---|---|---|---|---|
| ಉತ್ಪಲ ಮಾಲಾ ವೃತ್ತ | 4 | 1 | 20 | 28 | 'ಭರನಭಭರ ' ಲಗ | - (ಗುರು) | ಗುರುವೊಂದಾದಿಯೊಳುತ್ಪಲಂ |
| ಚಂಪಕ ಮಾಲಾ ವೃತ್ತ | 4 | 1 | 21 | 28 | 'ನಜಭಜಜಜರ' | UUUU | ಲಘು ನಾಲ್ಕು ಚಂಪಕಮ್ |
| ಸ್ರಗ್ಧರಾ ವೃತ್ತ | 4 | 1 | 21 | 33 | 'ಮರಭನಯಯಯ' | - - - - | ಗುರುನಾಲ್ಕಾಗಿರಲಂತು ಸ್ರಗ್ಧರೆ |
| ಮಹಾಸ್ರಗ್ಧರಾ ವೃತ್ತ | 4 | 1 | 22 | 33 | 'ಸತತನಸರರ' ಗ | UU- - - | ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ |
| ಶಾರ್ದೂಲ ವಿಕ್ರೀಡಿತ ವೃತ್ತ | 4 | 1 | 19 | 30 | 'ಮಸಜಸತತ' ಗ | - - - | ಗುರುಮೊದಲ್ ಮೂರಾಗೆ ಶಾರ್ದೂಲಮಾ |
| ಮತ್ತೇಭ ವಿಕ್ರೀಡಿತ ವೃತ್ತ | 4 | 1 | 20 | 30 | 'ಸಭರನಮಯ' ಲಗ | UU - - | ಲಘು ದ್ವಂದ್ವಂ ಗುರುದ್ವಂದ್ವಮಾ ಗಿರೆ ಮತ್ತೇಭ |

downloaded from: www.kpscvaani.com

## ಮಾದರಿ ಪ್ರಶ್ನೆಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1) ಕಂದಪದ್ಯದಲ್ಲಿರುವ ಪಾದಗಳ ಸಂಖ್ಯೆ :
ಎ) 4 ಬಿ) 6 ಸಿ) 3 ಡಿ) 1

2) ಭಾಮಿನಿ ಷಟ್ಪದಿಯ ಮೊದಲ ಸಾಲಿನ ಮಾತ್ರೆಗಳ ಸಂಖ್ಯೆ :
ಎ) 3। 4। 2। 4 ಬಿ) 4। 4। 4। 4 ಸಿ) 3। 4। 3। 4 ಡಿ) 5। 5। 5। 5

3) ಅಕ್ಷರಗಳ ಗಣ ಹೊಂದಿರುವ ಛಂಧಸ್ಸು :
ಎ) ಕಂದ ಬಿ) ಷಟ್ಪದಿ ಸಿ) ವೃತ್ತಗಳು ಡಿ) ರಗಳೆ

4) ಗುರು ಲಘು ಮೊದಲಿರೆ :
ಎ) ಮನಗಣ ಬಿ) ಭಯಗಣ ಸಿ)ಜರಗಣ ಡಿ) ಸತಗಣ

5) ಗುರುವೊಂದಾದಿಯೊಳ್ ______ :
ಎ) ಉತ್ಪಲಂ ಬಿ) ಚಂಪಕ ಸಿ) ಮತ್ತೇಭ ಡಿ) ಸ್ರಗ್ಧರಾ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

6) ಕಂದ : ನಾಲ್ಕು ಸಾಲು : : ಷಟ್ಪದಿ : ____________

7) ಗುರು ಲಘು ಮೂರಿರೆ : ಮನಗಣ : : ಗುರುಲಘು ಕೊನೆಯಿರೆ : ___________

8) ಕಂದಪದ್ಯ : ಮಾತ್ರಗಣ : : ಉತ್ಪಲಮಾಲಾ ವೃತ್ತ : ____________

9) ಅಕ್ಷರ : ಭಗಣ : : ಬಲ್ಗಯ್ಯ : ____________

10) ಲಘುದ್ವಯ ತ್ರಿಗುರುವಿಂದಕ್ಕುಂ: ಮಹಾಸ್ರಗ್ಧರಾ : :ಲಘು ನಾಲ್ಕುಗಿರೆ : ___________

**ಈ ಕೆಳಗಿನ ಪದ್ಯಕ್ಕೆ ಪ್ರಸ್ತಾರ ಹಾಕಿ,ಗಣ ವಿಂಗಡಿಸಿ ಛಂದಸ್ಸು ಹೆಸರಿಸಿ**

11) ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ

ಅಥವಾ

ನೆಲಕಿಱಿವೆನೆಂದು ಬಗೆದಿರೆ
ಚಲಕಿಱಿವೆಂ ಪಾಂಡುಸುತರೊಳೀನೆಲನಿದು ಪಾ

12) ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು

ಅಥವಾ

ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ

**ಉತ್ತರಗಳು : 1) ಎ) 4 2) ಸಿ) 3। 4। 3। 4 3) ಸಿ) ವೃತ್ತಗಳು 4) ಬಿ) ಭಯಗಣ 5) ಎ) ಉತ್ಪಲಂ 6) ಆರು ಸಾಲು 7) ಸತಗಣ 8) ಅಕ್ಷರಗಣ 9) ತಗಣ 10) ಚಂಪಕ**



downloaded from: www.kpscvaani.com

11)

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| UUU | U – U | – U U | U – U | U – U | U – U | – U – |
| ಒಡವೆ | ಯನರ್ಥಿ | ಗಿತ್ತನ | ವನೀತ | ಳಮಂ ಗು | ರುಗಿತ್ತೆ | ನೀಗಳೊಂ |

ಛಂದಸ್ಸು – ಚಂಪಕ ಮಾಲಾ ವೃತ್ತ

**ಅಥವಾ**

4 4 4 = 12

| U U U U | U – U | U U U U |
|---|---|---|
| ನೆಲಕಿಱ | ವೆನೆಂದು | ಬಗೆದಿರೆ |

4 4 4 4 4 = 12

| UUUU | – – | U U U U | – U U | U U – |
|---|---|---|---|---|
| ಚಲಕಿಱ | ವೆಂ ಪಾಂ | ಡುಸುತರೊ | ಳೀನೆಲ | ನಿದು ಪಾ |

ಛಂದಸ್ಸು– ಕಂದ ಪದ್ಯ

12)

5 5 5 5 =20

| U U – U | – U – | U U U U U | U U UUU |
|---|---|---|---|
| ತೆಗೆದುತ್ತ | ರೀಯುಮಂ | ಮುರಿದು ಕುದು | ರೆಯ ಗಳಕೆ |

5 5 5 5 =20

| U UU UU | – U U U | – – U | U U U – |
|---|---|---|---|
| ಬಿಗಿದುಕದ | ಳೀದ್ರುಮಕೆ | ಕಟ್ಟಲ್ಕೆ | ಮುನಿಸುತರ್ |

5 5 5 5 5 5 1ಗುರು =30+1ಗುರು

| U U U UU | – U – | UUU UU | – U – | U U UUU | – U U U | – |
|---|---|---|---|---|---|---|
| ಮಿಗೆ ನಡುಗಿ | ಬೇಡಬೇ | ಡರಸುಗಳ | ವಾಜಿಯುಂ | ಬಿಡು ಬಡಿವ | ರೆಮ್ಮನೆನ | ಲು |

ಛಂದಸ್ಸು – ವಾರ್ಧಕ ಷಟ್ಪದಿ


downloaded from: www.kpscvaani.com

3 4 3 4 =14

| | | | |
|---|---|---|---|
| U U U | U U – | U U U | U U UU |
| ಕೊರಳ | ಸೆರೆ ಹಿ | ಗ್ಗಿದವು | ದೃಗುಜಲ |

3 4 3 4 =14

| | | | |
|---|---|---|---|
| U U U | UU UU | – U | UU– |
| ಉರವ | ಣಿಸಿ ಕಡು | ನೊಂದ | ನಕಟಾ |

3 4 3 4 3 4 1ಗುರು =21+ 1ಗುರು

| | | | | | | |
|---|---|---|---|---|---|---|
| U U U | UU – | – U | – U U | –U | U U U U | – |
| ಕುರುಪ | ತಿಗೆ ಕೇ | ಡಾದು | ದೆಂದನು | ತನ್ನ | ಮನದೊಳ | ಗೆ |

**ಛಂದಸ್ಸು : ಭಾಮಿನಿ ಷಟ್ಪದಿ**


downloaded from: www.kpscvaani.com

# ಅಲಂಕಾರಗಳು

**ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಶಬ್ಧಾರ್ಥ ವೈಚಿತ್ರ್ಯಗಳೆ ಅಲಂಕಾರಗಳು.**

ಅಲಂಕಾರದಲ್ಲಿ **'ಶಬ್ದಾಲಂಕಾರ',** ಮತ್ತು **'ಅರ್ಥಾಲಂಕಾರ'** ಎಂದು ಎರಡು ವಿಭಾಗಗಳಿವೆ.

## ಶಬ್ದಾಲಂಕಾರ

✓ – ಶಬ್ದ ಅಥವಾ ಪದಗಳ ಜೋಡಣೆಯ ಮೂಲಕ ಕಾವ್ಯ ಅಥವಾ ಮಾತಿನ ಸೌಂದರ್ಯ ಹೆಚ್ಚಿದರೆ ಅದನ್ನು **ಶಬ್ದಾಲಂಕಾರ.**

ಇದರಲ್ಲಿ **ಅನುಪ್ರಾಸ, ಯಮಕ** ಮತ್ತು **ಚಿತ್ರಕವಿತ್ವ** ಎಂದು ಮೂರು ವಿಭಾಗಗಳಿವೆ.

✷ **ಅನುಪ್ರಾಸ** : ಅಕ್ಷರಗಳ ಆವೃತ್ತತೆಯೆ ಅನುಪ್ರಾಸ.

ಅನುಪ್ರಾಸವನ್ನು **ವೃತ್ತ್ಯನುಪ್ರಾಸ** ಮತ್ತು **ಛೇಕಾನುಪ್ರಾಸ** ಎಂಬುದಾಗಿ ಮತ್ತೆ ವಿಭಾಗಿಸಲಾಗಿದೆ.

- **ವೃತ್ತ್ಯನುಪ್ರಾಸ** :– ಒಂದು ಅಥವಾ ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲುಗಳಲ್ಲಿ ಮತ್ತೆ ಮತ್ತೆ ಬಂದರೆ ಅಂದರೆ ಪುನರಾವರ್ತನೆಗೊಂಡರೆ ಅದನ್ನು **ವೃತ್ತ್ಯನುಪ್ರಾಸ** ಎಂದು ಕರೆಯುತ್ತಾರೆ.

ಉದಾ:– "ಎಳಗಿಳಿಗಳ ಬಳಗಗಳು ನಳನಳಿಸಿ ಬೆಳೆದ ಕಳವೆಯ ಎಳೆಯ ಕಾಳಿಗೆ ಎಳಸಿ ಬಂದವು"

- **ಛೇಕಾನುಪ್ರಾಸ** :– ಎರಡೆರಡು ವ್ಯಂಜನಗಳು ಪುನರಾವರ್ತನೆಗೊಂಡರೆ ಅದನ್ನು **ಛೇಕಾನುಪ್ರಾಸ** ಎನ್ನುತ್ತಾರೆ.

ಉದಾ:–

ಕೆಲದೊಳ್ ಪುಳಿಂದಿಯಿರೆ ಪೆ ।
ರ್ಬುಲಿ ಬಂದೊಡಮಂಜನಕ್ಕ **ನೋಡಂನೋಡಂ** ॥
ಚಲದಿಂ **ಕಾಡಂಕಾಡಂ** ।
ಸಲೆ ಪಸಿವಂ ಮರೆದು ತಣಿದು **ಬೇಡಂಬೇಡಂ** ॥

✷ **ಯಮಕ** :– ಮೂರು ಅಥವಾ ಅದಕ್ಕಿಂತ ಹೆಚ್ಚು ಅಕ್ಷರಗಳುಳ್ಳ ಪದವಾಗಲಿ, ಪದಭಾಗವಾಗಲಿ ಒಂದು ಪದ್ಯದ ಆದಿ, ಮಧ್ಯ, ಅಥವಾ ಅಂತ್ಯದಲ್ಲಿ ನಿಯತವಾಗಿ ಪುನಃ ಪುನಃ ಬಂದರೆ ಅದು **ಯಮಕಾಲಂಕಾರ** ವೆನಿಸುವುದು.

**ಅಮಳ್ಗಳ್** ನಯವಿಕ್ರಮಗುಣ ।
**ದಮಳ್ಗಳ್** ನೃಪಶಾಸ್ತ್ರ ಪರಿಣತರವರಂ ॥
**ಸಮರ**ದೊಳಗಗ್ರ ಶೌರ್ಯಂ ।
**ಸಮರಸ** ಸಂಪನ್ನನಾವನುದಾರನಪ್ಪನ್ ॥


downloaded from: www.kpscvaani.com

✷ **ಚಿತ್ರಕವಿತ್ವ** :- ವೈಚಿತ್ರ್ಯಪೂರ್ಣವಾಗಿ ಅಕ್ಷರಗಳನ್ನೂ, ಪದಗಳನ್ನೂ ಜೋಡಿಸಿ ಪದ್ಯರಚಿಸುವುದು **ಚಿತ್ರಕವಿತ್ವ** . ಇದರಲ್ಲಿ ನಿರೋಷ್ಠ್ಯ ತಾಲವ್ಯ, ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರ, ಹಾರಬಂಧ, ಮುರಜಬಂಧ ಇತ್ಯಾದಿ ಪ್ರಕಾರಗಳಿವೆ.

**ಉದಾ: ನನ್ನನ ನನ್ನನ ನಿನ್ನೋನನ್ನನ**

**ಮನ್ನದ ಮನ್ನಿಯ ಅನ್ನದ ಚನ್ನನವನ**

## ಅರ್ಥಾಲಂಕಾರ

✓ – ಪದಗಳ ಅರ್ಥ ಚಮತ್ಕಾರದಿಂದ ಕಾವ್ಯದ ಅಥವಾ ಅರ್ಥದ ಸೌಂದರ್ಯ ಹೆಚ್ಚಿದರೆ ಅದನ್ನು **ಅರ್ಥಾಲಂಕಾರ.**

**ಪರಿಕಲ್ಪನೆಗಳು**

**ಉಪಮೇಯ**: ವಾಕ್ಯದಲ್ಲಿ ಕವಿ ಯಾವುದನ್ನು ವರ್ಣಿಸುತ್ತಾನೋ ಅದು ಉಪಮೇಯ. (ವರ್ಣಿಸಿಕೊಳ್ಳುವ ಪದ)

**ಉಪಮಾನ** : ಯಾವ ವಸ್ತುವನ್ನು ಆಧಾರವಾಗಿಟ್ಟುಕೊಂಡು ಅಥವಾ ಮಾನವನ್ನಾಗಿಟ್ಟುಕೊಂಡು ವರ್ಣಿಸಲಾಗಿದೆಯೋ ಅದು ಉಪಮಾನ. (ವರ್ಣಿಸುವ ಪದ)

**ಉಪಮ ವಾಚಕ** : ಉಪಮೇಯ, ಉಪಮಾನಗಳನ್ನು ಕೂಡಿಸುವ ಪದ(ಅಂತೆ,ವೊಲು,ಆಂಗ, ಹಾಂಗ)

**ಸಾಧರಣ ಧರ್ಮ** : ಗುಣ ಕ್ರಿಯೆಗಳು (ಉಪಮೇಯ –ಉಪಮಾನಗಳಲ್ಲಿನ ಗುಣಕ್ರಿಯೆಗಳ ಸಾಮ್ಯತೆ)

## ಉಪಮಾಲಂಕಾರ

**ಲಕ್ಷಣ** : ಉಪಮಾ ಎಂದರೆ ಹೋಲಿಕೆ ಎಂದರ್ಥ. ಉಪಮೇಯ ಉಪಮಾನಗಳೊಳಗೆ ಉಪಮಾ (ಹೋಲಿಕೆ) ಇರುವ ಅಲಂಕಾರವೇ ಉಪಮಾಲಂಕಾರ

1) " **ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ** " (2016 ಮಾರ್ಚ್) (2016 ಜೂನ್)

2) "**ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.**"

3) ' **ಮರನೇರಿದ ಮರ್ಕಟನಂತೆ** '

4)" **ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ** "

5) " **ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ** " (2016 ಜೂನ್)

6) " **ನೊಳವಿಂಗೆ ತಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನ ದೊಂದಳವು?**"

7) " **ಸೀತೆಯ ಮುಖ ಕಮಲದಂತೆ ಅರಳಿತು** "



downloaded from: www.kpscvaani.com

**ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ.** **01x 03 =03**

ಅಂಕ ವಿತರಣೆ
ಅಲಂಕಾರದ ಹೆಸರು –1 ಅಂಕ
ಸಮನ್ವಯ –1 ಅಂಕ
ಲಕ್ಷಣ – 1 ಅಂಕ
ಒಟ್ಟು – 3 ಅಂಕಗಳು

1) **"ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ "** (2016 ಮಾರ್ಚ್) (2016 ಜೂನ್)

ಅಲಂಕಾರ :– ಉಪಮಾಲಂಕಾರ

**ಉಪಮೇಯ** :– ನೀಚರಿಗೆ ಮಾಡುವ ಉಪಕಾರ

**ಉಪಮಾನ** :– ಹಾವಿಗೆ ಎರೆದ ಹಾಲು

**ಉಪಮಾ ವಾಚಕ** :– ಅಂತೆ

**ಸಮಾನ ಧರ್ಮ** :– ಸ್ಪಷ್ಟವಾಗಿಲ್ಲ (ಪ್ರಯೋಜನವಿಲ್ಲ)

**ಸಮನ್ವಯ** :– ಇಲ್ಲಿ ಉಪಮೇಯವಾದ ನೀಚರಿಗೆ ಮಾಡಿದ ಉಪಕಾರವನ್ನು ಉಪಮಾನವಾದ ಹಾವಿಗೆ ಎರೆದ ಹಾಲಿಗೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**ಲಕ್ಷಣ** :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ' **ಉಪಮಾಲಂಕಾರ** '

2) **"ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು"**

**ಅಲಂಕಾರ :- ಉಪಮಾಲಂಕಾರ**

**ಉಪಮೇಯ** :– ಭೀಮ ದುರ್ಯೋಧನರು

**ಉಪಮಾನ** :– ಮದಗಜಗಳು

**ಉಪಮಾ ವಾಚಕ** :– ಅಂತೆ

**ಸಮಾನ ಧರ್ಮ** :– ಹೋರಾಟ

**ಸಮನ್ವಯ** :– ಇಲ್ಲಿ ಉಪಮೇಯವಾದ ಭೀಮದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**ಲಕ್ಷಣ** :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ' **ಉಪಮಾಲಂಕಾರ** '



downloaded from: www.kpscvaani.com

3) ' **ಮರನೇರಿದ ಮರ್ಕಟನಂತೆ**'

ಅಲಂಕಾರ :– ಉಪಮಾಲಂಕಾರ ( ಉಪಮೇಯ ಲುಪ್ತೋಮಾಲಂಕಾರ)

**ಉಪಮೇಯ :–** ಲುಪ್ತವಾಗಿದೆ (ಮನಸ್ಸು)

**ಉಪಮಾನ :–** ಮರವೇರಿದ ಮರ್ಕಟ

**ಉಪಮಾ ವಾಚಕ :–** ಅಂತೆ

**ಸಮಾನ ಧರ್ಮ :–** ಚಂಚಲತೆ

**ಸಮನ್ವಯ :–** ಇಲ್ಲಿ ಉಪಮೇಯಮೇಯ ಲುಪ್ತವಾಗಿದೆ ಆದ್ದರಿಂದ ಇದು ಉಪಮೇಯ ಲುಪ್ತೋಮಾಲಂಕಾರ

**ಲಕ್ಷಣ :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'**

4) " **ಒಳಗಿನ ಮಂದಿ ಗುಂಡು ಹೊಡಿದರೂ ಮುಂಗಾರಿ ಸಿಡಿಲ ಸಿಡಿದ್ಹಾಂಗ** "

**ಅಲಂಕಾರ :- ಉಪಮಾಲಂಕಾರ**

**ಉಪಮೇಯ :–** ಒಳಗಿನ ಮಂದಿ ಗುಂಡು ಹೊಡೆಯುವುದು

**ಉಪಮಾನ :– ಮುಂಗಾರಿನ** ಸಿಡಿಲು ಸಿಡಿಯುವುದು

**ಉಪಮಾ ವಾಚಕ :–**ಹಾಂಗ

**ಸಮಾನ ಧರ್ಮ :–**ಸಿಡಿಯುವುದು

**ಸಮನ್ವಯ :– ಇಲ್ಲಿ ಉಪಮೇಯವಾದ** ಒಳಗಿನ ಮಂದಿ ಗುಂಡು ಹೊಡೆಯುವುದನ್ನು ಉಪಮಾನವಾದ

ಮುಂಗಾರಿನ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**ಲಕ್ಷಣ :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ' ಉಪಮಾಲಂಕಾರ '**



downloaded from: www.kpscvaani.com

5) "ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ" (2016 ಜೂನ್)

**ಅಲಂಕಾರ :- ಉಪಮಾಲಂಕಾರ**

**ಉಪಮೇಯ :–**ಗುಂಡು ಸುರಿಯುವುದು

**ಉಪಮಾನ :–**ಸಿಡಿಲು ಸಿಡಿಯುವುದು

**ಉಪಮಾ ವಾಚಕ :–**ಹಾಂಗ

**ಸಮಾನ ಧರ್ಮ :–**ಸುರಿಯುವುದು

**ಸಮನ್ವಯ :– ಇಲ್ಲಿ ಉಪಮೇಯವಾದ** ಗುಂಡು ಸುರಿಯುವುದನ್ನು ಉಪಮಾನವಾದ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**ಲಕ್ಷಣ** :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ' **ಉಪಮಾಲಂಕಾರ** '

6) " ನೊಳವಿಂಗೆ ತಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನ ದೊಂದಳವು?"

**ಅಲಂಕಾರ :- ಉಪಮಾಲಂಕಾರ**

**ಉಪಮೇಯ :– ಆಂಬವೊಲಾಂಬರಮುಂಟೆ ನಿನ್ನ ದೊಂದಳವು**

**ಉಪಮಾನ :– ನೊಳವಿಂಗೆ ತಪ್ಪೆ ವರಂ**

**ಉಪಮಾ ವಾಚಕ :–** ಎಂಬವೊಲ್

**ಸಮಾನ ಧರ್ಮ : ಸ್ಪಷ್ಟವಾಗಿಲ್ಲ**

**ಸಮನ್ವಯ :–** ಇಲ್ಲಿ ಉಪಮೇಯವಾದ ಆಂಬವೊಲಾಂಬರಮುಂಟೆ ನಿನ್ನ ದೊಂದಳವು ಎನ್ನುವುದನ್ನು ಉಪಮಾನವಾದ ನೊಳವಿಂಗೆ ತಪ್ಪೆ ವರಂ ಎಂಬ ವಾಕ್ಯಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**ಲಕ್ಷಣ** :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ' ಉಪಮಾಲಂಕಾರ '

7) " **ಸೀತೆಯ ಮುಖ ಕಮಲದಂತೆ ಅರಳಿತು** "

**ಅಲಂಕಾರ** :-

**ಉಪಮೇಯ** :–

**ಉಪಮಾನ** :–

**ಉಪಮಾ ವಾಚಕ** :–

**ಸಮಾನ ಧರ್ಮ** :–

**ಸಮನ್ವಯ** :–

**ಲಕ್ಷಣ** :–



downloaded from: www.kpscvaani.com

## ರೂಪಕಾಲಂಕಾರ

**ಲಕ್ಷಣ:**

↓ **ಅತಿ ಸಾಮ್ಯದಿಂದಾಗಿ ಉಪಮೇಯ ಉಪಮಾನಗಳಲ್ಲಿ ಅಭೇಧವನ್ನು ಹೇಳಿ ವರ್ಣಿಸಿದಾಗ ಅದು 'ರೂಪಕಾಲಂಕಾರ' ವಾಗುತ್ತದೆ.**

↓ ಉಪಮೇಯ-ಉಪಮಾನಗಳಲ್ಲಿ ಅಭೇಧತೆಯನ್ನು ಕಲ್ಪಿಸುವುದು ರೂಪಕಾಲಂಕಾರ.

↓ ಉಪಮೇಯ-ಉಪಮಾನಗಳಲ್ಲಿ ವ್ಯತ್ಯಾಸ ಇಲ್ಲ ಅವೆರಡು ಒಂದೇ ಎಂದು ಹೇಳುವುದು ರೂಪಕಾಲಂಕಾರ.

**********

1) **"ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ "**
2) **" ಮಾರಿಗೌತಣವಾಯ್ತು ನಾಳಿನ ಭಾರತವು "**
3) **" ಸೀತೆಯ ಮುಖಕಮಲ ಅರಳಿತು."**

1. **ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ**

**ಅಲಂಕಾರ :- ರೂಪಕಾಲಂಕಾರ**

**ಉಪಮೇಯ :-** ಒಡಲಬೇಗೆ

**ಉಪಮಾನ :-** ಬೆಂಕಿಯುರಿ

**ಸಮನ್ವಯ** :- ಇಲ್ಲಿ ಉಪಮೇಯವಾದ ಅಯೋಧ್ಯೆಯ ಪ್ರಜೆಗಳ ಒಡಲ ಬೇಗೆಯನ್ನು ಉಪಮಾನವಾದ ಬೆಂಕಿಯುರಿಗೆ ಅಭೇದವಾಗಿ ರೂಪಿಸಿ ವರ್ಣಿಸಲಾಗಿದೆ.

**ಲಕ್ಷಣ :-** ಉಪಮೇಯ ಮತ್ತು ಉಪಮಾನಗಳಿಗೆ ಅಭೇದತೆಯನ್ನು ಹೇಳುವುದು ' **ರೂಪಕಾಲಂಕಾರ** '.

2. **'ಮಾರಿಗೌತಣವಾಯ್ತು ನಾಳಿನ ಭಾರತವು'** **(2016 ಮಾರ್ಚ್)**

**ಅಲಂಕಾರ :- ರೂಪಕಾಲಂಕಾರ**

**ಉಪಮೇಯ :-** ನಾಳಿನ ಭಾರತ ಯುದ್ಧ

**ಉಪಮಾನ :-** ಮಾರಿಯ ಔತಣ

**ಸಮನ್ವಯ** :- ಇಲ್ಲಿ ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇದವಾಗಿ ರೂಪಿಸಿ ವರ್ಣಿಸಲಾಗಿದೆ.

**ಲಕ್ಷಣ :-** ಉಪಮೇಯ ಮತ್ತು ಉಪಮಾನಗಳಿಗೆ ಅಭೇದತೆಯನ್ನು ಹೇಳುವುದು ' **ರೂಪಕಾಲಂಕಾರ** '.



downloaded from: www.kpscvaani.com

3) “ ಸೀತೆಯ ಮುಖಕಮಲ ಅರಳಿತು.”

**ಅಲಂಕಾರ :–**

**ಉಪಮೇಯ :–**

**ಉಪಮಾನ :–**

**ಸಮನ್ವಯ** :–

**ಲಕ್ಷಣ :–**

## ದೃಷ್ಟಾಂತಾಲಂಕಾರ

**ಲಕ್ಷಣ:** ಎರಡು ಬೇರೆಬೇರೆ ವಾಕ್ಯಗಳಲ್ಲಿ ಅರ್ಥಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವವು ತೋರಿಬಂದರೆ ಅದು **ದೃಷ್ಟಾಂತಾಲಂಕಾರ** .

**ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.**

ಅಲಂಕಾರ :– **ದೃಷ್ಟಾಂತಾಲಂಕಾರ**

ಉಪಮೇಯ :– ಮಾತು ಬಲ್ಲವನಿಗೆ ಜಗಳವಿಲ್ಲ

ಉಪಮಾನ :– ಊಟ ಬಲ್ಲವನಿಗೆ ರೋಗವಿಲ್ಲ

ಸಮನ್ವಯ :– ಇಲ್ಲಿ ಉಪಮೇಯವಾದ **ಮಾತುಬಲ್ಲವನಿಗೆ ಜಗಳವಿಲ್ಲ** ಹಾಗೂ ಉಪಮಾನವಾದ **ಊಟ ಬಲ್ಲವನಿಗೆ ರೋಗವಿಲ್ಲ** ಎರಡೂ ಬಿಂಬ ಪ್ರತಿಬಿಂಬದಂತೆ ಇರುವುದರಿಂದ ಇಬ್ಬರೂ ಒಂದೇ ಎಂಬುದು ಪ್ರತಿಪಾದಿತವಾಗಿದೆ

**ಲಕ್ಷಣ:** ಎರಡು ಬೇರೆಬೇರೆ ವಾಕ್ಯಗಳಲ್ಲಿ ಅರ್ಥಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವವು ತೋರಿಬಂದರೆ ಅದು **ದೃಷ್ಟಾಂತಾಲಂಕಾರ**

**ಅಭ್ಯಾಸಕ್ಕಾಗಿ**

**ಉಪ್ಪಿಗಿಂತ ರುಚಿಯಿಲ್ಲ ; ತಾಯಿಗಿಂತ ಬಂಧುವಿಲ್ಲ**



downloaded from: www.kpscvaani.com

## ಉತ್ಪ್ರೇಕ್ಷಾಲಂಕಾರ

**ಲಕ್ಷಣ :** ಉಪಮೇಯವಾದ ವಸ್ತುವನ್ನು ಅಥವಾ ಸನ್ನಿವೇಶವನ್ನು ಉಪಮಾನವಾದ ವಸ್ತುವನ್ನಾಗಿ ಅಥವಾ ಸನ್ನಿವೇಶವನ್ನಾಗಿ ಕಲ್ಪಿಸುವುದೇ **ಉತ್ಪ್ರೇಕ್ಷಾಲಂಕಾರ.**

**ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.**

**ಅಲಂಕಾರ :– ಉತ್ಪ್ರೇಕ್ಷಾಲಂಕಾರ .**

**ಉಪಮೇಯ :–** ಅಚ್ಛೋದ ಸರೋವರ

**ಉಪಮಾನ** :– ರನ್ನಗನ್ನಡಿ

**ಸಮನ್ವಯ :–** ಉಪಮೇಯವಾದ ಅಚ್ಛೋದ ಸರೋವರವನ್ನು ಉಪಮಾನವಾದ ರನ್ನಗನ್ನಡಿ ಎಂಬುದಾಗಿ ಸಂಭಾವಿಸಿ (ಕಲ್ಪಿಸಿ) ವರ್ಣಿಸಲಾಗಿದೆ.

**ಲಕ್ಷಣ :** ಉಪಮೇಯವಾದ ವಸ್ತುವನ್ನು ಅಥವಾ ಸನ್ನಿವೇಶವನ್ನು ಉಪಮಾನವಾದ ವಸ್ತುವನ್ನಾಗಿ ಅಥವಾ ಸನ್ನಿವೇಶವನ್ನಾಗಿ ಕಲ್ಪಿಸುವುದೇ **ಉತ್ಪ್ರೇಕ್ಷಾಲಂಕಾರ.**

- **ಅಭ್ಯಾಸಕ್ಕಾಗಿ**

  **‘ ಸೀತೆಯ ಮುಖ ಕಮಲವೋ ಎಂಬಂತೆ ಅರಳಿತು ’**

  **‘ ವಿದ್ವಾಂಸನಾದ ಆತನು ಸಾಕ್ಷಾತ್ ಸರಸ್ವತಿಯೋ ಎಂಬಂತೆ ಬೆಳಗಿದನು ’**

## ಅರ್ಥಾಂತರನ್ಯಾಸಾಲಂಕಾರ

**ಲಕ್ಷಣ :– ಒಂದು ವಿಶೇಷವಾಕ್ಯವನ್ನು ಸಾಮಾನ್ಯ ವಾಕ್ಯದಿಂದ ಅಥವಾ ಸಾಮಾನ್ಯವಾಕ್ಯವನ್ನು ವಿಶೇಷವಾಕ್ಯದಿಂದ ಸಮರ್ಥನೆಮಾಡುವುದೇ ಅರ್ಥಾಂತರನ್ಯಾಸಾಲಂಕಾರವೆನಿಸುತ್ತದೆ.**

**‘ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?’**

**ಅಲಂಕಾರ :– ಅರ್ಥಾಂತರನ್ಯಾಸಾಲಂಕಾರ.**

ಉಪಮೇಯ (ವಿಶೇಷವಾಕ್ಯ) :– ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.

ಉಪಮಾನ ( ಸಾಮಾನ್ಯ ವಾಕ್ಯ) :– ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

ಸಮನ್ವಯ :– ಇಲ್ಲಿ ಉಪಮೇಯವಾದ ‘ ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು’ ಎಂಬ ವಿಶೇಷವಾಕ್ಯವನ್ನು ಉಪಮಾನವಾದ ‘ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?’ ಎಂಬ ಸಾಮಾನ್ಯ ವಾಕ್ಯದಿಂದ ಸಮರ್ಥಿಸಲಾಗಿದೆ.

**ಲಕ್ಷಣ :–** ಒಂದು ವಿಶೇಷವಾಕ್ಯವನ್ನು ಸಾಮಾನ್ಯ ವಾಕ್ಯದಿಂದ ಅಥವಾ ಸಾಮಾನ್ಯವಾಕ್ಯವನ್ನು ವಿಶೇಷವಾಕ್ಯದಿಂದ ಸಮರ್ಥನೆಮಾಡುವುದೇ ಅರ್ಥಾಂತರನ್ಯಾಸಾಲಂಕಾರವೆನಿಸುತ್ತದೆ.



downloaded from: www.kpscvaani.com

← ಅಭ್ಯಾಸಕ್ಕಾಗಿ

‘ ಆತನು ಉಂಡಮನೆಗೆ ಕೇಡು ಬಗೆದನು. ಕೃತಜ್ಞರು ಏನನ್ನು ತಾನೆ ಮಾಡವುದಿಲ್ಲ ! ’

## ಮಾದರಿ ಪ್ರಶ್ನೆಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1) ಇದೊಂದು ಶಬ್ದಾಲಂಕಾರ :

ಎ) ಅನುಪ್ರಾಸ ಬಿ) ಉಪಮಾಲಂಕಾರ ಸಿ) ರೂಪಕಾಲಂಕಾರ ಡಿ ) ಉತ್ಪ್ರೇಕ್ಷಾಲಂಕಾರ

2) ನಿರೋಷ್ಠ್ಯ ತಾಲವ್ಯ, ಏಕಾಕ್ಷರ, ದ್ವಕ್ಷರ, ತ್ರ್ಯಕ್ಷರ, ಹಾರಬಂಧ, ಮುರಜಬಂಧ ಇತ್ಯಾದಿ ಪ್ರಕಾರಗಳನ್ನು ಹೊಂದಿರುವ ಅಲಂಕಾರ :

ಎ) ಯಮಕ ಬಿ) ವೃತ್ತಾನು ಪ್ರಾಸ ಸಿ) ಚಿತ್ರ ಕವಿತ್ವ ಡಿ) ರೂಪಕ

3) ಉಪಮೇಯ ಮತ್ತು ಉಪಮಾನಗಳಲ್ಲಿ ಹೋಲಿಕೆ ಇರುವ ಅಲಂಕಾರ :

ಎ) ದೃಷ್ಟಾಂತಾಲಂಕಾರ ಬಿ) ಉತ್ಪ್ರೇಕ್ಷಾಲಂಕಾರ ಸಿ) ರೂಪಕಾಲಂಕಾರ ಡಿ) ಉಪಮಾಲಂಕಾರ

4) ‘ಮರನೇರಿದ ಮರ್ಕಟನಂತೆ ’ - ಈ ವಾಕ್ಯದಲ್ಲಿರುವ ಉಪಮಾನ :

ಎ) ಮರ ಬಿ) ಮರ್ಕಟ ಸಿ) ಮರನೇರಿದ ಮರ್ಕಟ ಡಿ) ಮನಸ್ಸು

5) ಎರಡು ಬೇರೆಬೇರೆ ವಾಕ್ಯಗಳಲ್ಲಿ ಅರ್ಥಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವವು ತೋರಿಬಂದರೆ ಅದು

ಎ) ದೃಷ್ಟಾಂತಾಲಂಕಾರ ಬಿ) ಉಪಮಾಲಂಕಾರ ಸಿ) ಉತ್ಪ್ರೇಕ್ಷಾಲಂಕಾರ ಡಿ ) ಯಮಲಾಲಂಕಾರ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

6) ಯಮಕ : ಶಬ್ದಾಲಂಕಾರ : : ರೂಪಕಾಲಂಕಾರ : ________________

7)ಉಪಮಾನ,ಉಪಮೇಯಗಳಲ್ಲಿ ಭೇದವಿಲ್ಲ :ರೂಪಕ: :ಉಪಮಾನ,ಉಪಮೇಯಗಳಲ್ಲಿ ಹೋಲಿಕೆ:___

8) ಉಪಮಾಲಂಕಾರ : ಅರ್ಥಾಲಂಕಾರ: : ಚಿತ್ರ ಕವಿತ್ವ : _____________

**9. ಕೆಳಗಿನ ವಾಕ್ಯದಲ್ಲಿನ ಅಲಂಕಾರ ಗುರುತಿಸಿ ,ಸಮನ್ವಯಗೊಳಿಸಿ ಬರೆಯಿರಿ**

“ಮಾರಿಗೌತಣವಾಯ್ತು ನಾಳಿನ ಭಾರತವು”

ಅಥವಾ

“ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ”

**ಉತ್ತರಗಳು :**

1) **ಎ) ಅನುಪ್ರಾಸ** 2) **ಸಿ) ಚಿತ್ರ ಕವಿತ್ವ** 3) **ಡಿ) ಉಪಮಾಲಂಕಾರ** 4) **ಸಿ) ಮರನೇರಿದ ಮರ್ಕಟ**

5) **ಎ) ದೃಷ್ಟಾಂತಾಲಂಕಾರ** 6) **ಅರ್ಥಾಲಂಕಾರ** 7) **ಉಪಮಾಲಂಕಾರ** 8) **ಶಬ್ದಾಲಂಕಾರ**

**9) ಉತ್ತರವನ್ನು ಮೇಲೆ ನೀಡಲಾಗಿದೆ.**


downloaded from: www.kpscvaani.com



**ಆತ್ಮ ವಿಶ್ವಾಸಂ ಸರ್ವತ್ರ ಸಾಧನಂ**



downloaded from: www.kpscvaani.com